ಜಾನಪದ ಪುಸ್ತಕ ಮಾಲೆ-೧೮

# ಕರ್ನಾಟಕ ಜನಪದ ರಂಗಭೂಮಿ

ಡಾ|| ಚಕ್ಕೆರೆ ಶಿವಶಂಕರ್

ಕರ್ನಾಟಕ ಜಾನಪದ ಪರಿಷತ್ತು

ನಂ. ೧, ಜಲದರ್ಶಿನಿ ಬಡಾವಣೆ

ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ

ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು - ೫೬೦ ೦೫೪

**KARNATAKA JANAPADA RANGABHOOMI -** By Dr. Chakkere Shivashankar, published by **Karnataka Janapada Parishath,** No.1, Jaladarshini Layout, Near M.S. Ramaiah Hospital Gate, New BEL Road, Bangalore-560 054.

Phone: 080-23605033, Janapada Loka: 7201143 / 7271555.

ಹಕ್ಕುಗಳು : ಲೇಖಕರಿಗೆ ಸೇರಿವೆ

ಪ್ರಥಮ ಮುದ್ರಣ : ೨೦೦೮

ಪುಟಗಳು : ೩೨

ಬೆಲೆ : ರೂ. ೧೦ (ಹತ್ತು ರೂಪಾಯಿಗಳು)

**ಗ್ರಂಥ ಪ್ರಕಟಣಾ ಸಲಹಾ ಸಮಿತಿ**

| | |
|---|---|
| ನಾಡೋಜ ಡಾ॥ ಜಿ. ನಾರಾಯಣ | ಅಧ್ಯಕ್ಷರು |
| ಶ್ರೀ ಟಿ. ತಿಮ್ಮೇಗೌಡ | ಸದಸ್ಯರು |
| ಶ್ರೀಮತಿ ಇಂದಿರಾ ಬಾಲಕೃಷ್ಣ | ಸದಸ್ಯರು |
| ಶ್ರೀಗೊ.ರು. ಚನ್ನಬಸಪ್ಪ | ಸದಸ್ಯರು |
| ನಾಡೋಜ ಡಾ॥ ಸಿದ್ಧಲಿಂಗಯ್ಯ | ಸದಸ್ಯರು |
| ಡಾ॥ ಎಂ. ಎ. ಜಯಚಂದ್ರ | ಸದಸ್ಯರು |

ಪ್ರೊ. ಡಿ. ಲಿಂಗಯ್ಯ ಸಂಪಾದಕರು

ಡಾ. ಚಕ್ಕೆರೆ ಶಿವಶಂಕರ್ ಕಾರ್ಯದರ್ಶಿ-ಸಂಚಾಲಕರು

**ಮುದ್ರಕರು :**

ಚಂದನ ಪ್ರಿಂಟರ್ಸ್

ನಂ. ೫೭, ವಿನಾಯಕ ಕಾಂಪ್ಲೆಕ್ಸ್

೮೦ ಅಡಿ ರಸ್ತೆ, ೯ನೇ ಮೇನ್, ಶ್ರೀನಿವಾಸನಗರ

ಬ್ಯಾಂಕ್ ಕಾಲೋನಿ, ಬೆಂಗಳೂರು-೫೬೦ ೦೫೦

## ಅಧ್ಯಕ್ಷರ ಮಾತು

---

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜಾನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ ಜಾನಪದ ಜನಪ್ರಿಯ ಪುಸ್ತಕ ಮಾಲೆಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ-ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಡಾ. ಚಕ್ಕೆರೆ ಶಿವಶಂಕರ್ ಅವರು '**ಕರ್ನಾಟಕ ಜನಪದ ರಂಗಭೂಮಿ**' ಎಂಬ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟನಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಜಿ.ನಾರಾಯಣ**

ಅಧ್ಯಕ್ಷರು

ಕರ್ನಾಟಕ ಜಾನಪದ ಪರಿಷತ್ತು

## ಲೇಖಕರ ಮಾತು

---

ಜನರಿಂದ, ಜನರಿಗಾಗಿ, ಜನರಿಗೋಸ್ಕರ ಹುಟ್ಟಿಕೊಂಡ ಜನಪದ ಕಲೆಗಳು ಜನಪದದ ಕಲಾತ್ಮಕ ಅಭಿವ್ಯಕ್ತಿ. ವರ್ಣರಂಜಿತ ವೇಷಭೂಷಣ, ಸುಮಧುರ ವಾದ್ಯಮೇಳ, ಸಂಭಾಷಣೆ, ಹಾಡುಗಾರಿಕೆ, ಕುಣಿತ, ಅಭಿನಯ ಮೊದಲಾದ ಅಂಶಗಳನ್ನು ತನ್ನಲ್ಲಿ ಅಂತರ್ಗತಿಸಿಕೊಂಡಿರುವ ಜನಪದ ಕಲೆಗಳು ಸಮುದಾಯದ ಬದುಕಿನ ಮೌಲ್ಯಗಳನ್ನು ಒಳಗೊಂಡಿರುವ ಸಂಸ್ಕೃತಿಯ ಕುರುಹುಗಳು ಎಂದರೆ ತಪ್ಪಲ್ಲ.

ಕರ್ನಾಟಕದಲ್ಲಿ ಸುಮಾರು ೨೦೦ಕ್ಕೂ ಹೆಚ್ಚು ಜನಪದ ಕಲೆಗಳು ಪ್ರಚಲಿತದಲ್ಲಿವೆ.  ಇವುಗಳಲ್ಲಿ ಕೆಲವು ಪ್ರಕಾರಗಳಂತೂ ಸಾರ್ವತ್ರಿಕ  ಜನಪ್ರಿಯತೆಯನ್ನು ಪಡೆದುಕೊಂಡಿವೆ. ಹಲವು ಪ್ರಕಾರಗಳು ಆಯಾ ಪ್ರದೇಶಕ್ಕೆ ಮಾತ್ರವೇ ಸೀಮಿತವಾಗಿ ಉಳಿದುಕೊಂಡು ಬಂದಿವೆ. ಇಂತಹ ಪ್ರಾದೇಶಿಕ ಜನಪದ ಕಲೆಗಳಲ್ಲಿ ಕೆಲವನ್ನು ಆಯ್ದು ಈ ಕಿರುಹೊತ್ತಿಗೆಯಲ್ಲಿ ಬಣ್ಣದ

ಛಾಯಾಚಿತ್ರಗಳೊಂದಿಗೆ ಪರಿಚಯಿಸಲಾಗಿದೆ. ಆದ್ದರಿಂದ ಆಯಾ ಭಾಗದ ಕಲೆಗಳು ಎಂದಾಗ ಇದು ಸಮಗ್ರವಲ್ಲ. ಕೇವಲ ಪ್ರಾತಿನಿಧಿಕ ಕಲೆಗಳ ಪರಿಚಯವಷ್ಟೆ

ಕರ್ನಾಟಕ ಜಾನಪದ ಪರಿಷತ್ತು ಜನಪ್ರಿಯ ಜಾನಪದ ಪುಸ್ತಕ ಮಾಲೆಯಲ್ಲಿ ಜಾನಪದದ ವಿವಿಧ ಸಂಗತಿಗಳನ್ನು ಕುರಿತು ಪರಿಚಯಿಸುವ ಸಲುವಾಗಿ ಕಿರುಹೊತ್ತಿಗೆಗಳನ್ನು ಪ್ರಕಟಸುತ್ತಿರುವುದು ಪ್ರಶಂಸಾರ್ಹ. ಇಂತಹ ಕಿರುಹೊತ್ತಿಗೆಗಳು ಮಕ್ಕಳಿಂದ ಮೊದಲುಗೊಂಡು ನವ ಸಾಕ್ಷರರವರೆಗೂ ಅರಿವು ಮೂಡಿಸುತ್ತವೆ ಎಂಬುದರಲ್ಲಿ ಸಂದೇಹವಿಲ್ಲ. ಈ ಕಿರುಹೊತ್ತಿಗೆಗಳ ಪ್ರಕಟಣೆಗೆ ಕಾರಣರಾದ ಕರ್ನಾಟಕ ಜಾನಪದ ಪರಿಷತ್ತಿನ ಎಲ್ಲಾ ಪದಾಧಿಕಾರಿಗಳು ಮತ್ತು ಗ್ರಂಥ ಪ್ರಕಟಣಾ ಸಮಿತಿ ಸದಸ್ಯರುಗಳಿಗೆ ಹೃತ್ಪೂರ್ವಕ ಧನ್ಯವಾದಗಳು.

**ಡಾ. ಚಕ್ಕೆರೆ ಶಿವಶಂಕರ್**

# ಕೃಷ್ಣಪಾರಿಜಾತ

ಬೆಳಗಾವಿ, ಬಿಜಾಪುರ ಜಿಲ್ಲೆಗಳಲ್ಲಿ ಇಂದಿಗೂ ಅತ್ಯಂತ ಜನಪ್ರಿಯವಾಗಿರುವ ಕೃಷ್ಣಪಾರಿಜಾತವು ಸಣ್ಣಾಟದಲ್ಲಿ ಕಂಡುಬರುವ ಒಂದು ವಿಶೇಷ ಪ್ರಕಾರ. ಇದರ ವಸ್ತು ಮತ್ತು ಪ್ರಯೋಗ ಪದ್ಧತಿಗಳಿಂದಾಗಿ 'ಸಣ್ಣಾಟಗಳ ರಾಜ' ಎಂದು ಕರೆಯುತ್ತಾರೆ. ಅಪರಾಳ ತಮ್ಮಣ್ಣನಿಂದ ಆರಂಭವಾದ ಈ ರಂಗಪರಂಪರೆಗೆ ಅವನೇ ಮೊತ್ತಮೊದಲ ಭಾಗವತ. ಕೃಷ್ಣಪಾರಿಜಾತವು ಕೃಷ್ಣ-ರುಕ್ಮಿಣಿಯರ ದಿವ್ಯ ಸಂಬಂಧವನ್ನು ನಿರೂಪಿಸುವ ಭಕ್ತಿ ಪ್ರಧಾನವಾದ ಬಯಲಾಟ ಇದರಲ್ಲಿರುವ ಸಂಭಾಷಣಾ ಶೈಲಿ, ಸಂಗೀತ ಶೈಲಿ, ಕಥಾವಸ್ತುವಿನ ನಿರ್ವಹಣೆಯಿಂದಾಗಿ ಪಾರಿಜಾತವು ಸಣ್ಣಾಟ ಮತ್ತು ದೊಡ್ಡಾಟಗಳಿಗಿಂತಲೂ ಭಿನ್ನವಾಗಿ ಪ್ರತ್ಯೇಕ ರಂಗ ಪ್ರಕಾರವನಿಸಿದೆ.

ಕಲಹಪ್ರಿಯ ನಾರದನ ಚಿತಾವಣೆಯಿಂದಾಗಿ ಸತ್ಯಭಾಮೆಯು ಪಾರಿಜಾತ ಪುಷ್ಪಕ್ಕೆ ಹಟ ಹಿಡಿಯುತ್ತಾಳೆ. ರುಕ್ಮಿಣಿಯ ಕೈತಪ್ಪಿಸಿ ತನಗೆ ತಂದುಕೊಡಬೇಕೆಂದು ಪತಿಯಾದ ಕೃಷ್ಣನನ್ನು ಕಾಡುತ್ತಾಳೆ, ಮುನಿಯುತ್ತಾಳೆ, ಮುನಿಸಿಕೊಳ್ಳುತ್ತಾಳೆ. ಪತಿಪ್ರೇಮದ ಒಡೆತನಕ್ಕಾಗಿ ಸವತಿಯರೀರ್ವರ ನಡುವೆ ಕಲಹ ಏರ್ಪಡುತ್ತದೆ. ಕೊನೆಗೆ ತನ್ನ ತಪ್ಪಿನ ಅರಿವಾದಾಗ ಸತ್ಯಭಾಮೆಯು ಪಶ್ಚಾತ್ತಾಪದಿಂದ ನೊಂದು ಪತಿಯನ್ನು ಸೇರುತ್ತಾಳೆ. ಪೌರಾಣಿಕ ಪ್ರಸಂಗ ಒಂದನ್ನು ವಾಸ್ತವಿಕ ಬದುಕಿನೊಂದಿಗೆ ಹೊಂದಿಸಿ ಭಕ್ತಿ-ಜ್ಞಾನ-ಧರ್ಮ-ನೀತಿಗಳ ವಿವೇಚನೆಯೊಂದಿಗೆ ಕೌಟುಂಬಿಕ ಬಂಧುರ ಸಂಬಂಧವನ್ನು ಅತ್ಯುತ್ತಮವಾಗಿ ಹೆಣೆಯಲಾಗಿದೆ.

ಕೃಷ್ಣಪಾರಿಜಾತವನ್ನು ಹಿಂದಿನ ದಿನಗಳಲ್ಲಿ ಮೂರು ದಿನಗಳ ಕಾಲ ಪ್ರದರ್ಶಿಸಲಾಗುತ್ತಿತ್ತು. ಮೊದಲನೆಯ ದಿನ ಗೊಲ್ಲತಿ ರುಕ್ಮಿಣಿಯ ಭಾಗ, ಎರಡನೆಯ ದಿನ ಸತ್ಯಭಾಮೆಯ ಭಾಗ, ಮೂರನೆಯ ಹಾಗೂ ಕೊನೆಯ ದಿನ ಕೊರವಂಜಿ ಭಾಗ. ಕೃಷ್ಣಪಾರಿಜಾತದ ಅತ್ಯಂತ ಶ್ರೇಷ್ಠ ಕಲಾವಿದೆ ಮತ್ತು ಸಂಗೀತಗಾರಳಾಗಿದ್ದ ಕೌಜಲಗಿ ನಿಂಗಮ್ಮ ಮೂರು ದಿನಗಳ ಕಾಲ ಈ ಆಟವನ್ನಾಡಿ ದಾಖಲೆ ಸ್ಥಾಪಿಸಿದ್ದಳು. ಆದರೆ ಇತ್ತೀಚಿನ ದಿನಗಳಲ್ಲಿ ಈ ಆಟವು ಕೇವಲ ಒಂದೆರಡು ಗಂಟೆಗಳ ಮಟ್ಟಕ್ಕೆ ಇಳಿದಿದೆ.

ಕೃಷ್ಣಪಾರಿಜಾತದಲ್ಲಿ ಸಾಮಾನ್ಯವಾಗಿ ಎಂಟು ಮಂದಿ ಕಲಾವಿದರಿರುತ್ತಾರೆ... ಭಾಗವತನ ನಾಂದಿ ಹಾಡಿನೊಂದಿಗೆ ಪ್ರಾರಂಭವಾಗುವ ಆಟಕ್ಕೆ ಮುಖವಾಡ ಧರಿಸಿದ ಬಾಲ ಗಣಪತಿಯ ರಂಗಪ್ರವೇಶ, ಭಾಗವತನಿಂದ ಗಣಪತಿಯ ಸ್ತುತಿ, ಗಣಸ್ತುತಿಯ ನಂತರ ಕಥಾಭಾಗದ ಆರಂಭ. ಗೊಲ್ಲತಿ ಮತ್ತು ಕೃಷ್ಣರ ಪ್ರವೇಶ, ಕೃಷ್ಣ ಗೊಲ್ಲತಿಯನ್ನು ಒಲಿಸಿಕೊಳ್ಳುವಲ್ಲಿಗೆ ಪೂರ್ವರಂಗದ ಮುಕ್ತಾಯ. ಭಾಗವತ ಅಥವಾ ದೂತಿಯರು ಆಟದ ಆರಂಭದಿಂದ ಮುಕ್ತಾಯದವರೆಗೂ ರಂಗಸ್ಥಳದ ಮೇಲಿರುತ್ತಾರೆ. ರಂಗಕ್ಕೆ ಬಂದ ಪಾತ್ರಗಳನ್ನು ಪರಿಚಯಿಸುವುದು, ಸೇವಕನಂತೆ ವರ್ತಿಸುವುದು, ಹಾಡುವುದು, ಹಾಸ್ಯ ಮುಂತಾದ ಜವಾಬ್ದಾರಿಯುತ ಕೆಲಸಗಳನ್ನು ದೂತಿಯು ನಿರ್ವಹಿಸುತ್ತಾಳೆ. ಪ್ರದರ್ಶನದ ಯಶಸ್ಸು ದೂತಿಯನ್ನವಲಂಬಿಸಿರುತ್ತದೆ.

ಕೃಷ್ಣಪಾರಿಜಾತದ ಹಿಮ್ಮೇಳದಲ್ಲಿ ತಬಲಾ, ಹಾರ್ಮೋನಿಯಂ, ತಾಳ ವಾದ್ಯಗಳಿರುತ್ತವೆ. ಹಿಂದೂಸ್ತಾನಿ ಸಂಗೀತಕ್ಕೆ ತಬಲಾ ಡಗ್ಗಾ ಅವಶ್ಯವಿರುವುದರಿಂದ ಕೃಷ್ಣಪಾರಿಜಾತದಲ್ಲಿ ಇದು ಅತ್ಯವಶ್ಯ ತಾಳಗಳು ದೊಡ್ಡವಿದ್ದು ಒಂದು ಇನ್ನೊಂದಕ್ಕಿಂತ ಚಿಕ್ಕದಿರುತ್ತದೆ. ಕೃಷ್ಣಪಾರಿಜಾತದ ಕುಣಿತವು ದೊಡ್ಡಾಟದ ಕುಣಿತದಂತೆ ಅಬ್ಬರದ್ದಲ್ಲ, ಲಾಲಿತ್ಯಪೂರ್ಣವಾದುದು,

ಲಘುವಾದುದು. ರಂಗಸ್ಥಳದ ಒಂದು ಬದಿಯಿಂದ ಇನ್ನೊಂದು ಬದಿಗೆ ಮೆಲ್ಲಗೆ ಸರಿದಾಡುತ್ತ ಲಘು ಕುಣಿತವನ್ನು ಪಾತ್ರಗಳುಪ ಪ್ರದರ್ಶಿಸುತ್ತವೆ.

ಕೃಷ್ಣಪಾರಿಜಾತ ಜೀವಾಳವು ಅದರ ಎಶಿಷ್ಟ ಸಂಗೀತ ಶೈಲಿಯಲ್ಲಿ ಅಡಗಿದೆ ಇಲ್ಲಿನದು ಮಾರ್ಗ ಶೈಲಿಯ ಸಂಗೀತ. ಪಾತ್ರಧಾರಿಗಳು ತಮ್ಮ ಹಾಡುಗಳನ್ನು ತಾವೇ ಹಾಡುವುದರಿಂದ ಸಂಗೀತ ಜ್ಞಾನ ಹೊಂದಿರಬೇಕು. ಹಾಡಿನ ಆರೋಹಣ, ಅವರೋಹಣಗಳೊಂದಿಗೆ ಕಿರು ಆಲಾಪನೆ, ಸ್ವರವಿಲಾಸದ ತಾನ ಬಾಜಿ ಗತ್ತುಗಳನ್ನು ಬಳಸಿಕೊಂಡು ಹಾಡುವ ರೀವಿಯು ಪಾರಿಜಾತಕ್ಕೆ ಮಾತ್ರವೇ ಮೀಸಲಾದದ್ದು ಇದರಿಂದಾಗಿ ಪಾರಿಜಾತದ ಹಾಡುಗಳಿಗೆ ಇರುವಷ್ಟು ಜನಪ್ರಿಯತೆಯು ಮತ್ತಾವ ಬಯಲಾಟದ ಹಾಡುಗಳಿಗೂ ದಕ್ಕಲಿಲ್ಲ. ಕೃಷ್ಣಪಾರಿಜಾತದಲ್ಲಿ ಸಂಭಾಷಣೆಗಿಂತ ಗೀತೆಗೆ ಹೆಚ್ಚಿನ ಪ್ರಾಧಾನ್ಯತೆ. ಒಟ್ಟಿನಲ್ಲಿ ಪಾರಿಜಾತವು ರಸಹಾಸ್ಯ, ಸಾಂದರ್ಭಿಕ ಟಿಪ್ಪಣಿ, ಆಧ್ಯಾತ್ಮ- ವೇದಾಂತಗಳ ನಿರ್ವಚನ, ಭಕ್ತಿ ಮತ್ತು ಶೃಂಗಾರಗಳ ಹೊಂದಾಣಿಕೆ,

ತಾಳಬದ್ಧ ಸಂಗೀತಶೈಲಿಗಳಿಂದಾಗಿ ಜನಪ್ರಿಯವಾಗಿದೆ. ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಗಳು ಪಾರಿಜಾತದ ನಾಡು ಎಂದು ಜನಜನಿತವಾಗಿವೆ.

## ತಾಳಮದ್ದಲೆ

ದಕ್ಷಿಣ ಹಾಗೂ ಉತ್ತರ ಕನ್ನಡ ಜಿಲ್ಲೆಯ ಜನಪ್ರಿಯ ಕಲೆ. ಯಕ್ಷಗಾನ ಬಯಲಾಟಗಳು ಬೇಸಿಗೆಯಲ್ಲಿ ನಡೆದರೆ ತಾಳಮದ್ದಲೆ ಮಳೆಗಾಲದಲ್ಲಿ ಮನೆಗಳಲ್ಲಿಯೇ ನಡೆಯುತ್ತದೆ. ತಾಳಮದ್ದಲೆಗೆ ಪ್ರಸಂಗ, ಬೈಠಕ್ ಎಂಬ ಹೆಸರುಗಳೂ ಇವೆ. ಇದು ಯಕ್ಷಗಾನದ ಮುಂಚಿನ ರೂಪವೆಂದು ವಿದ್ವಾಂಸರ ಅಭಿಪ್ರಾಯ. ಪಾತ್ರಧಾರಿಗಳು ಬಣ್ಣ ಹಚ್ಚದೆ ಒಂದೆಡೆ ಕುಳಿತು, ಭಾಗವತರು ಮೃದಂಗವಾದನದ ಮೇಳವನ್ನಿಟ್ಟುಕೊಂಡು ಆಖ್ಯಾನ ಮಾಡುವುದಕ್ಕೆ 'ತಾಳ ಮದ್ದಲೆ' ಎನ್ನುತ್ತಾರೆ. ಪಾತ್ರಗಳು ವೇಷಾಲಂಕಾರ ಹಾಗೂ ನೃತ್ಯದಿಂದ ಹೊರತಾಗಿರುತ್ತವೆ.

ನಾಲ್ಕಾರು ಜನ ಒಂದು ಕಡೆ ಕುಳಿತು ಕಥೆಯ ಪಾತ್ರವನ್ನು ಪದ್ಯಗಳ ಆಧಾರದ ಮೇಲೆ ಪ್ರತಿಭೆಯಿಂದ ತಮ್ಮ ಸಂಭಾಷಣೆಯಲ್ಲಿ ಹೇಳುತ್ತಾರೆ. ತಾಳಮದ್ದಲೆ ಪ್ರಸಂಗಗಳಲ್ಲಿ ಪುಣ್ಯಕಥೆಗಳನ್ನು ಕೇಳಿದಲ್ಲಿ ಇಷ್ಟಾರ್ಥ ಸಿದ್ಧಿಸುವುದೆಂಬ ನಂಬಿಕೆ ಜನರಲ್ಲಿದೆ. ತಾಳಮದ್ದಲೆಗೆ ಯಕ್ಷಗಾನದಂತೆ ರಂಗಸ್ಥಳ ಬೇಕಿಲ್ಲ. ಪ್ರಸಂಗಕ್ಕೆ ಗೊತ್ತುಮಾಡಿದ ದಿನದಂದು ಒಂದು ವೇದಿಕೆ ನಿರ್ಮಿಸುತ್ತಾರೆ. ಜಗಲಿಯಿದ್ದರೆ ಅಲ್ಲೇ ಕೂರುತ್ತಾರೆ. ಜಗಲಿಯ ಒಂದು ಕಡೆಗೆ ಮದ್ದಳೆಯವರು ಮತ್ತು ಭಾಗವತರು ಕುಳಿತುಕೊಳ್ಳುತ್ತಾರೆ..

ತಾಳಮದ್ದಲೆಯಲ್ಲಿ ಕಲಾವಿದರು ಕುಳಿತಲ್ಲಿಂದಲೇ ಕೈ, ಕಣ್ಣು ಮುಖಭಾವ ಪ್ರದರ್ಶನ ಮಾಡುತ್ತಾರೆ. ಇಲ್ಲಿ ಅಭಿನಯಕ್ಕಿಂತ ಮಾತೇ (ಸಂಭಾಷಣೆ) ಮುಖ್ಯ ಆಕರ್ಷಣೆ. ಮಾತಿನ ಮೂಲಕವೇ ಆಯಾಯ ಪಾತ್ರಗಳನ್ನು ಕೇಳುಗರ ಕಣ್ಣ ಮುಂದೆ ನಿಲ್ಲುವಂತೆ ಮಾಡುತ್ತಾರೆ. ಪ್ರಸಂಗದಲ್ಲಿ ಭಾಗವಹಿಸುವ ಕಲಾವಿದರು ಯಾವುದೇ ಪಾತ್ರದ ಮಾತುಗಳನ್ನು ಕಂಠಪಾಠ ಮಾಡದೆ ಕುಳಿತಲ್ಲಿಯೇ ಸ್ಫೂರ್ತಿಯಿಂದ ಹೇಳಬಲ್ಲರು.

ಪ್ರಸಂಗಗಳಲ್ಲಿ ಭಾಗವತನೇ ಕೇಂದ್ರ ವ್ಯಕ್ತಿ. ಅವನು ಕಥೆಯ ಪದ್ಯಗಳನ್ನು ಹಾಡಿ ಮುಗಿಸಿದ ನಂತರ ಆ ಪಾತ್ರಕ್ಕೆ ಸಂಬಂಧಿಸಿ ಅರ್ಥಧಾರಿಗಳು ಮಾತನ್ನು ಆರಂಭಿಸುತ್ತಾರೆ. ಅರ್ಥಧಾರಿಗಳು ನೃತ್ಯಾಭಿನಯಗಳ ಸಹಾಯವಿಲ್ಲದೆ ಕೇವಲ

ವಾಚಿಕಾಭಿನಯದಲ್ಲಿಯೇ ಪದ್ಯದ ತಿರುಳನ್ನು ವಿವರಿಸಬೇಕಾದುದರಿಂದ ಭಾಷಣವನ್ನು ಬೆಳೆಸಬೇಕಾಗುತ್ತದೆ. ಇಲ್ಲಿಯ ಭಾಗವತರು ಕಂದಪದ್ಯಗಳ ಜೊತೆ ಇನ್ನೂ ಕೆಲವು ಮಟ್ಟುಗಳನ್ನು ಹಾಡುತ್ತಾರೆ. ಸಾಮಾನ್ಯವಾಗಿ ಕಾಳಗ ಪ್ರಧಾನವಾದ ಪ್ರಸಂಗಗಳನ್ನು ಆರಿಸಿಕೊಳ್ಳದೆ ಸಂಧಾನ ಅಥವಾ ಪರಿಣಯದ ಪ್ರಸಂಗಗಳನ್ನು, ತಾಳಮದ್ದಲೆಗೆ ಆರಿಸಿಕೊಳ್ಳುವುದು ವಾಡಿಕೆ. ತಾಳಮದ್ದಲೆಯು ರಾತ್ರಿ ಆರಂಭವಾಗಿ ಬೆಳಗಾಗುವವರೆಗೂ ನಡೆಯುತ್ತದೆ. ಕಥೆಯನ್ನು ಕೇಳಿ ಜನ ಆನಂದಿಸುತ್ತಾರೆ. ಪಾತ್ರಧಾರಿಗಳ ತರ್ಕಬದ್ಧ ಚರ್ಚೆ, ಶಾಸ್ತ್ರಜ್ಞಾನ. ಭಾಷಾಶೈಲಿ ಇವುಗಳನ್ನು ಮೆಚ್ಚುತ್ತಾರೆ. ತಾಳಮದ್ದಲೆಯು ಕರಾವಳಿ ಭಾಗದಲ್ಲಿ ಮಳೆಗಾಲದ ದಿನಗಳಲ್ಲಿ ಮನರಂಜನೆ ನೀಡುವ ಸಾಧನವಾಗಿ ಇಂದಿಗೂ ಉಳಿದುಕೊಂಡು ಬಂದಿದೆ.

## ಗೊಂಬೆಯಾಟ

**ತೊಗಲುಗೊಂಬೆಯಾಟ:** ಒಂದು ಕಾಲಕ್ಕೆ ಸೂತ್ರದ ಗೂಂಬೆಯಾಟ ಸಮಾಜದ ಮೇಲುವರ್ಗದವರ ಮನರಂಜನೆಯಾಗಿದ್ದಂತೆ, ತೊಗಲು ಗೊಂಬೆಯಾಟ ಸಮಾಜದ ಕೆಳ ವರ್ಗದವರ ಮನರಂಜನೆಯಾಗಿತ್ತು. ಈ ಗೊಂಬೆಗಳು ಚಪ್ಪಟೆಯಾಗಿದ್ದು ತೊಗಲಿನಿಂದ ಮಾಡಿದವುಗಳಾಗಿರುತ್ತವೆ. ತೊಗಲನ್ನು ಸರಿಯಾದ ಆಕಾರಕ್ಕೆ ಕತ್ತರಿಸಿ ಅದರ ಮೇಲೆ ಬಣ್ಣದಿಂದ ಅಂಗಾಂಗಗಳನ್ನು ಬಿಡಿಸುತ್ತಾರೆ. ಕೈಕಾಲುಗಳು ಚಲಿಸುವಂತಿರುತ್ತವೆ. ತೊಗಲಿನ ಎರಡು ಕಡೆಗೂ ಸೂಕ್ಷ್ಮವಾಗಿ ಬಣ್ಣ ಹಾಕಲಾಗಿದ್ದು, ಅದು ಪರದೆಯ ಮೇಲೆ ಬಣ್ಣದ ನೆರಳನ್ನು ಚಲ್ಲುವಷ್ಟು ಪಾರದರ್ಶಕವಾಗಿರುತ್ತದೆ. ಕಿಳ್ಳೆಕ್ಯಾತರು ಎಂಬ ಜನಾಂಗದವರು ತೊಗಲುಗೊಂಬೆಯಾಟದ ವೃತ್ತಿ ನಿರತರು. ಇವರನ್ನು ಗೊಂಬೆ ರಾಮರು, ಚಿತ್ರಮರಾಠರು ಎಂದು ಕರೆಯುತ್ತಾರೆ. ಪ್ರದರ್ಶನ ನಡೆಯಬೇಕಾದರೆ ಕುಟುಂಬದವರೆಲ್ಲರೂ ಭಾಗವಹಿಸುತ್ತಾರೆ. ನಾಲ್ಕು ಅಥವಾ ಐದು ಚದರಡಿ ಜಾಗದಲ್ಲಿ ಪರದೆ ಕಟ್ಟಿ ವೇದಿಕೆ ನಿರ್ಮಿಸಿ ಪರದೆಯ ಹಿಂದುಗಡೆ ದೂರದ ಕೊನೆಯಲ್ಲಿ ಪ್ರಕಾಶಮಾನವಾಗಿ ಉರಿಯುವ ಪಂಜನ್ನಿರಿಸುತ್ತಾರೆ. ಪಂಜು ಹಾಗೂ ಪರದೆಯ ಮಧ್ಯೆ ಗೊಂಬೆಗಳನ್ನು ಆಡಿಸುತ್ತಾರೆ. ಸೂಕ್ಷ್ಮವಾದ ದಾರ ಹಾಗೂ ತೆಳ್ಳನೆಯ ಕಡ್ಡಿಗಳಿಂದ ಗೊಂಬೆಯ ಚಲನವಲನಗಳನ್ನು ನಿಯಂತ್ರಿಸಲಾಗುತ್ತದೆ. ಇವುಗಳನ್ನು ಸೂತ್ರಧಾರರು ಹಿಡಿದಿರುತ್ತಾರೆ. ಗಂಡು ಪಾತ್ರದ ಸಂಭಾಷಣೆಯನ್ನು ಪುರುಷ, ಸ್ತ್ರೀ ಪಾತ್ರದ ಸಂಭಾಷಣೆಯನ್ನು ಸ್ತ್ರೀಯರು ಹೇಳುತ್ತಾರೆ. ಸಾಮಾನ್ಯವಾಗಿ ಮಹಾಭಾರತದ  ಘಟನೆಗಳು ಈ ಆಟಗಳ ವಸ್ತು. ಪ್ರದರ್ಶನ ೪ ರಿಂದ ೫ ಗಂಟೆ ನಡೆಯುತ್ತದೆ.

ಕರ್ನಾಟಕದಾದ್ಯಂತ ಈ ಕಲೆ ಜನಪ್ರಿಯ ಮನರಂಜನಾ ಪ್ರಕಾರವಾಗಿದ್ದಿತು. ಈ ಪ್ರದರ್ಶನಗಳನ್ನು ಏರ್ಪಡಿಸಿದರೆ ದನಗಳಿಗೆ ಚಪ್ಪೆರೋಗ ತಗಲುವುದಿಲ್ಲ. ಕಾಲಕ್ಕೆ ಸರಿಯಾಗಿ ಮಳೆಯಾಗುತ್ತದೆಂಬ ನಂಬಿಕೆ. ಗ್ರಾಮೀಣರಲ್ಲಿತ್ತು. ಬಣ್ಣದ ಚಲನಚಿತ್ರಗಳ ಇತ್ತೀಚಿನ ಕಾಲದಲ್ಲಿಯೂ ತೊಗಲುಗೊಂಬೆಯಾಟವು. ಜನಪ್ರಿಯ ಕಲೆಯಾಗಬಹುದಾಗಿದೆ. ವಾಲ್ಟ್ ಡಿಸ್ನಿಯವರ ಚಿತ್ರಗಳಂತೆ ಇವು ವಿಶೇಷವಾಗಿ ಮನರಂಜನೆ ನೀಡಬಲ್ಲವು. ತೊಗಲಿಗೆ ಬದಲು ಸೆಲ್ಯುಲಾಯ್ಡ್‌ಗಳಂಥ ಆಧುನಿಕ ಸಲಕರಣೆಗಳನ್ನು ಬಳಸಿ ಇದರ ತಂತ್ರ ಹಾಗೂ ಪ್ರದರ್ಶನ ರೀತಿಯನ್ನು ಆಧುನಿಕಗೊಳಿಸಬಹುದಾಗಿದೆ.  ಕರ್ನಾಟಕದಲ್ಲಿ ಮಲೆನಾಡು ಮತ್ತು ಕರಾವಳಿ. ಜಿಲ್ಲೆಗಳನ್ನು ಹೊರತುಪಡಿಸಿದರೆ. ಉಳಿದ ಎಲ್ಲಾ ಜಿಲ್ಲೆಗಳಲ್ಲೂ ತೊಗಲುಗೊಂಬೆಯಾಟವು ಪ್ರಚಲಿತದಲ್ಲಿದ್ದಿತು.

**ಸೂತ್ರದಗೊಂಬೆಯಾಟ :** ಈ ಜಗತ್ತೇ ಒಂದು ನಾಟಕರಂಗ, ಮನುಷ್ಯರೇ ಪಾತ್ರಧಾರಿಗಳು, ಆಡಿಸುವ ಸೂತ್ರಧಾರಿ ಮೇಲಿರುವ ನಿಯಾಮಕನೆಂಬ ದೈವಿಕ. ಮನೋಭಾವವೇ ಸೂತ್ರದ ಗೊಂಬೆಯಾಟದ ಹುಟ್ಟಿಗೆ ಕಾರಣ ಎನ್ನಬಹುದು. ಈ ಆಟವು ಪ್ರಾಚೀನ ಕಾಲದಿಂದಲೂ ಉಳಿದು ಬೆಳೆದುಕೊಂಡು ಬಂದಿದೆ.  ಕರ್ನಾಟಕದಾದ್ಯಂತ  ಕಂಡುಬರುವ ಸೂತ್ರದ ಗೊಂಬೆಯಾಟದಲ್ಲಿ ಮನುಷ್ಯರಿಗೆ ಬದಲಾಗಿ ಗೊಂಬೆಗಳು ಪಾತ್ರ ವಹಿಸುತ್ತವೆ. ಈ ಗೊಂಬೆಗಳ ಸೂತ್ರ ಹಿಡಿದು

ಆಡಿಸುವವನೇ ಸೂತ್ರಧಾರ. ಗೊಂಬೆಗಳು ಮನುಷ್ಯ್ಕರಂತೆಯೇ ನರ್ತಿಸುತ್ತವೆ. ಪ್ರೇಮಿಸುತ್ತವೆ. ದ್ವೇಷಿಸುತ್ತವೆ. ಹೋರಾಡುತ್ತವೆ... ಮನುಷ್ಯ ಬದುಕಿನ ರಾಗರಂಗುಗಳನ್ನೆಲ್ಲ ಗೊಂಬೆಗಳು ಅಭಿನಯಿಸಿ ತೋರಿಸುತ್ತವೆ. ಗೊಂಬೆಗಳು ಅಭಿನಯಿಸುವಾಗ ಹಿಮ್ಮೇಳವು ಪರದೆಯ ಹಿಂದೆ. ನಿಂತು ಮಾತನಾಡುತ್ತದೆ, ಪದಗಳನ್ನು ಹೇಳುತ್ತದೆ. ಶಬ್ದ ವಿಶೇಷಗಳ ಸಂಯೋಜನೆಯನ್ನು ಒದಗಿಸುತ್ತವೆ.

ಹಗುರವಾದ ಹಾಲಿವಾಣದ ಮರದಿಂದ ಗೊಂಬೆಗಳನ್ನು ತಯಾರಿಸುತ್ತಾರೆ. ಗೊಂಬೆಗಳು ಸಾಮಾನ್ಯವಾಗಿ ಎರಡರಿಂದ ನಾಲ್ಕು ಅಡಿ ಎತ್ತರವಿರುತ್ತವೆ. ಪಾತ್ರಗಳಿಗೆ ತಕ್ಕಂತೆ ಗೊಂಬೆಗಳಿಗೆ ತೊಡಿಸುವ ಆಭರಣಗಳನ್ನು ಕಲಾತ್ಮಕವಾಗಿ ಕುಸುರಿ ಕೆಲಸ ಮಾಡಿ ಸಿದ್ಧಪಡಿಸುತ್ತಾರೆ. ಗೊಂಬೆಗಳ ಮುಖಭಾವಕ್ಕೆ ತಕ್ಕಂತೆ ಬಣ್ಣಗಳನ್ನು ಬಳಸಿ ತಿದ್ದುತ್ತಾರೆ. ಗೊಂಬೆಗಳ ಕೈಕಾಲು ರುಂಡಗಳಿಗೆ ಕೀಲುಗಳನ್ನು ಜೋಡಿಸಿ ಕೈಗಳು, ಕಾಲುಗಳು ಮತ್ತು ಶಿರೋಭಾಗಕ್ಕೆ ಕಪ್ಪನೆಯ ದಾರಗಳನ್ನು ಅಳವಡಿಸುತ್ತಾರೆ. ಗೊಂಬೆಗಳನ್ನು ಕುಣಿಸುವಾಗ ಈ ದಾರಗಳನ್ನು ಸೂತ್ರಧಾರನು ತನ್ನ ಕೈ ಬೆರಳುಗಳು, ಮಣಿಕಟ್ಟುಗಳಿಗೆ ಕಟ್ಟಿಕೊಂಡು ಆಡಿಸುತ್ತಾನೆ. ಸೂತ್ರಧಾರ ಕುಶಲ ಕಲಾವಿದನಾಗಿದ್ದು ಚುರುಕುತನದಿಂದ ಕೂಡಿದ್ದರೆ ಆಟಕ್ಕೆ ಹೆಚ್ಚು ಕಳೆ ಕಟ್ಟುತ್ತದೆ. ಸೂತ್ರದ ಗೊಂಬೆಯಾಟದ ಯಶಸ್ಸು ಸೂತ್ರಧಾರನ ಪರಿಣತಿಯನ್ನು ಅವಲಂಭಿಸಿರುತ್ತದೆ. ಮೃದಂಗ, ತಾಳ, ಮುಖವೀಣೆ, ಹಾರ್ಮೋನಿಯಂ ಮುಂತಾದುವು ಹಿಮ್ಮೇಳದ ವಾದ್ಯಗಳು. ಇವುಗಳ ಲಯಬದ್ಧ ಸುಮಧುರ ನಾದವು ಆಟಕ್ಕೆ ಹೆಚ್ಚಿನ ಸೊಗಸನ್ನು ತಂದುಕೊಡುತ್ತದೆ. ಸೂತ್ರದ ಗೊಂಬೆಯಾಟದಲ್ಲಿ ರಾಮಾಯಣ, ಮಹಾಭಾರತ, ಭಾಗವತಗಳಿಂದ ಆಯ್ದ ಪ್ರಸಂಗಗಳೇ ಕಥಾವಸ್ತುಗಳಾಗಿರುತ್ತವೆ. ಮಂಡ್ಯ, ಮೈಸೂರು, ಹಾಸನ, ದಕ್ಷಿಣ ಕನ್ನಡ ಜಿಲ್ಲೆ, ಧಾರವಾಡ, ಬಳ್ಳಾರಿ," ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಸೂತ್ರದ ಗೊಂಬೆಯಾಟವು ಪ್ರಚಲಿತದಲ್ಲಿದೆ.

## ದಾಸರಾಟ

'ದಾಸ'ರೆನ್ನುವ ಜನಾಂಗ ಆಡುವ ಬಯಲಾಟದ ಒಂದು ಪ್ರಕಾರ. ದಾಸರು ಹಳ್ಳಿಯಿಂದ ಹಳ್ಳಿಗೆ ಸಂಚರಿಸುತ್ತಾ ಜಾತ್ರೆ ಉತ್ಸವಗಳ ಕಾಲದಲ್ಲಿ, ಆಶ್ರಯ ಸಿಗುವಲ್ಲೆಲ್ಲ ತಮ್ಮ ಕಲೆಯನ್ನು ಪ್ರದರ್ಶಿಸುತ್ತಾರೆ. ಇವರ ಆಟಗಳು ಸಾಮಾನ್ಯವಾಗಿ ಧಾರ್ಮಿಕ ವಸ್ತುಗಳನ್ನುಳ್ಳವು. ತಿರುಪತಿ ತಿಮ್ಮಪ್ಪನ ಭಕ್ತರು. ಈ ಮೇಳದ ಮುಖ್ಯಸ್ಥ ನಟ್ಟುವಾನ. ಪ್ರದರ್ಶನದ ಪೂರ್ಣಾಧಿಕಾರ, ಜವಾಬ್ದಾರಿ ಇವನದೇ- ಸ್ತ್ರೀ ಪುರುಷರಿಬ್ಬರೂ ಭಾಗವಹಿಸುವುದು ದಾಸರಾಟದ ವೈಶಿಷ್ಟ, ಪ್ರತಿಯೊಂದು ದಾಸರಾಟದ ಮೇಳವೂ ಹಾಡುವುದರಲ್ಲಿ ಕುಣಿಯುವುದರಲ್ಲಿ ನುರಿತಳಾದ ಒಬ್ಬ ಸುಂದರ ನಾಯಕಿ (ದಾಸಿ) ಯನ್ನು ಹೊಂದಿರುತ್ತದೆ. ಒಂದು ತಂಡದ ಜನಪ್ರಿಯತೆ ಈ ದಾಸಿಯನ್ನೇ ಅವಲಂಬಿಸಿರುತ್ತದೆ.

ಹಳ್ಳಿಯ ಯಾವುದೇ ಕೂಟ, ಚೌಕ, ರಸ್ತೆ ಅಥವಾ ಮಂಟಪಗಳು ಇವರ ರಂಗಸ್ಥಳವಾಗಬಹುದು. ನೆಲದ ಮೇಲೆ ಜಮಖಾನ ಹಾಸಿ ರಂಗ ಸಿದ್ದಪಡಿಸಿ ಮಧ್ಯದಲ್ಲಿ ಕಂಬಳಿ ಪರದೆ ಕಟ್ಟಿ ಅದರ ಹಿಂಭಾಗವನ್ನು ನೇಪಥ್ಯವನ್ನಾಗಿಸಿಕೊಂಡು ಮುಂಭಾಗವನ್ನು ರಂಗಭೂಮಿ ಮಾಡಿಕೊಳ್ಳುತ್ತಾರೆ. ತಿರುಪತಿ ತಿಮ್ಮಪ್ಪನ ಸಂಕೇತವಾಗಿ ನೇಪಥ್ಯದಲ್ಲಿ ದೀಪವೊಂದು ಉರಿಯುತ್ತಿರುತ್ತದೆ. ಇದರ ಮುಂದೆ ಧೂಪ, ಹಣ್ಣು, ತೆಂಗಿನಕಾಯಿ, ಗೆಜ್ಜೆ ಮತ್ತು ತಾಳಗಳಿರುತ್ತವೆ. ಎಲ್ಲರೂ ವೇಷಭೂಷಣಗಳನ್ನು ಧರಿಸಿಯಾದ ಮೇಲೆ ನಟ್ಟುವಾನ ಮತ್ತು ದಾಸಿ ದೀಪದೆದುರು ಕೈಮುಗಿದು ನಿಲ್ಲುತ್ತಾರೆ... ಉಳಿದ ನಟರು, ವಾದ್ಯವೃಂದದವರು ಅವರನ್ನನುಸರಿಸುತ್ತಾರೆ. ನಟ್ಟುವಾನ ದೀಪಕ್ಕೆ ಪೂಜೆ ಸಲ್ಲಿಸಿ, ತೆಂಗಿನಕಾಯಿ ಒಡೆದು ಅದರ ಹೋಳುಗಳನ್ನು ರಂಗದ ಎರಡೂ ಬದಿಗೂ ಎಸೆಯುತ್ತಾನೆ. ದೀಪಕ್ಕೆ ನಮಸ್ಕರಿಸಿ ದೀಪವನ್ನು ಕೈಗೆತ್ತಿಕೊಳ್ಳುತ್ತಾನೆ. ದಾಸಿ

ಗೆಜ್ಜೆ ಕಟ್ಟಿಕೊಳ್ಳುತ್ತಾಳೆ. ಎಲ್ಲರೂ ನಟ್ಟುವಾನನಿಗೆ ನಮಸ್ಕರಿಸುತ್ತಾರೆ. ನಟ್ಟುವಾನನ ಎಡಭಾಗದಲ್ಲಿ ಹಾರ್ಮೋನಿಯಂನವನು, ಬಲಭಾಗದಲ್ಲಿ ಮೃದಂಗದವನೂ ಕುಳಿತುಕೊಳ್ಳುತ್ತಾರೆ. ಕಂಬಳಿಯ ಹಿಂದೆ ೩ ಜನ ತಾಳ ಹಿಡಿದು ಕುಳಿತುಕೊಳ್ಳುತ್ತಾರೆ. ದಾಸರಾಟದ ಪ್ರೇಕ್ಷಕರನ್ನು 'ಪರಸಿ' ಎಂದು ಕರೆಯಲಾಗುತ್ತದೆ.

ದಾಸರಾಟಕ್ಕೆ ನಿರ್ದಿಷ್ಟ ರೂಪ; ವಸ್ತು ಇಲ್ಲ. ಮಹಾರಾಷ್ಟ್ರದಲ್ಲಿ ಇಂಥದೇ ಪ್ರಕಾರವನ್ನು 'ತಮಾಶಾ' ಎಂದು ಕರೆಯುತ್ತಾರೆ. ದಾಸರಾಟದ ಈ ದೇಶೀ ರಂಗಭೂಮಿಯು ಆರಾಧನೆಯಿಂದಲೇ ಹುಟ್ಟಿಕೊಂಡದ್ದು. ಗ್ರಾಮದೇವತೆಯ ಆಸಾದಿಯಂತೆ ಇಲ್ಲಿ ನಟ್ಟುವಾನನಿದ್ದಾನೆ. ಇವನನ್ನು 'ಮೇಟಿತಾಳ' ಅಥವಾ 'ಕಥೆಗಾರ' ಎನ್ನುವ ಹೆಸರುಗಳಿಂದ ಕರೆಯುತ್ತಾರೆ. ಪೂರ್ವಜರಿಂದ ಬಂದ ತಾಳಗಳನ್ನು ನಟ್ಟುವಾನನಲ್ಲದೆ ಬೇರೆ ಯಾರೂ ಮುಟ್ಟುವುದಿಲ್ಲ. ಅವನ ಪ್ರಕಾರ ಆಟವನ್ನು ಜೀವಂತವಾಗಿ ಉಳಿಸಿಕೊಂಡು ಹೋಗುವುದೇ ದೇವರ ಸೇವೆ. ಇವನು ರಂಗಸ್ಥಳದ ಮೇಲ್ವಿಚಾರಕನಾದುದರಿಂದ ಮೇಳಗಾರನೆಂತಲೂ ಕರೆಯುತ್ತಾರೆ. ಹಿಮ್ಮೇಳದಲ್ಲಿ ಮೂರು ಜನರಿದ್ದು ಅವರು ಒಳ ಅಟ್ಟದಲ್ಲಿ ಪ್ರೇಕ್ಷಕರಿಗೆ ಕಾಣದಂತೆ ನಿಂತಿರುತ್ತಾರೆ. ಮುಮ್ಮೇಳದವರ ಹಾಡನ್ನು ಇವರು ಪುನಃ ಹಾಡುತ್ತಾರೆ. ಆಗ ಪಾತ್ರಧಾರಿಗಳು ಕುಣಿಯುತ್ತಾರೆ.

ದಾಸರಲ್ಲಿ ಎಡಗೈ -ಬಲಗೈ ದಾಸರು ಎಂದಿದ್ದು ಎಡಗೈ ದಾಸರು ತಮ್ಮ ಹೆಣ್ಣು ಮಕ್ಕಳನ್ನು ದೇವಾಲಯಕ್ಕೆ ಬಿಡುವುದುಂಟು ಇದನ್ನು ದಾಸರು ಬಿಡುವುದೆಂದು ಕರೆಯುತ್ತಾರೆ. ದಾಸರಾಟದಲ್ಲಿ ಬರುವ ಶಿವ-ಶಕ್ತಿ ಮತ್ತು ಕೃಷ್ಣ-ರಾಧೆಯರ ಹೆಸರಿನಲ್ಲಿ ನಡೆಯುವ ಹೆಚ್ಚುಗಾರಿಕೆಯ ವಾದವನ್ನು ಕಲ್ಗಿ ಮತ್ತು ತುರಾ ಎಂದು ವಿಭಾಗಿಸಲಾಗಿದೆ. ತುರಾ ಪಂಥದವರು ಗಂಡು ಹೆಚ್ಚೆಂದರೆ ಕಲ್ಗಿ ಪಂಥದವರು ಹೆಣ್ಣು ಹೆಚ್ಚೆಂದು ವಾದಿಸುತ್ತಾರೆ. ಆದರೆ ದಾಸರಾಟದ ಪ್ರಧಾನ ವಸ್ತು ವಿಷ್ಣುವಿನ ದಶಾವತಾರಗಳೇ ಹೊರತು ಶಕ್ತಿಯ ಉಪಾಸನೆಯಲ್ಲ. ಹಿಂದೆ ವೈಷ್ಣವ ದಾಸರಲ್ಲದೆ ಶೈವದಾಸರು ಇದ್ದಂತೆ ತಿಳಿದುಬರುತ್ತದೆ. ದಾಸರಾಟದಲ್ಲಿ ಅವತಾರಗಳ ಕಥೆ ಬಿಟ್ಟರೆ ಉಳಿದ ಪ್ರದರ್ಶನವೆಲ್ಲ ಚಿಂದಿಯಾಗಿದ್ದು ತೇಪೆ ಹಚ್ಚಿದ ವಸ್ತುವಿನಿಂದ ಕೂಡಿರುತ್ತದೆ... ಪರಸ್ಪರ ಸಂಬಂಧವಿಲ್ಲದ ಅನೇಕಾಂಶಗಳನ್ನು ದಾಸರಾಟ ಒಳಗೊಂಡಿದೆ. ಆದ್ದರಿಂದಲೇ 'ದಾಸರಾಟ ಆಟವಲ್ಲ; ದೋಸೆ ಊಟ ಊಟವಲ್ಲ' ಎಂಬ ಗಾದೆ ಹುಟ್ಟಿಕೊಂಡದ್ದು.

ದಾಸರಾಟವು. ಒಂದು ಕಾಲಕ್ಕೆ ಕರ್ನಾಟಕದ ಉತ್ತರಭಾಗದಲ್ಲಿ ಅದರಲ್ಲೂ ಗುಲಬರ್ಗಾ, ಬೀದರ್, ರಾಯಚೂರು, ಧಾರವಾಡ, ಬಳ್ಳಾರಿ ಮೊದಲಾದ ಭಾಗಗಳಲ್ಲಿ ಶುದ್ಧ ಮನರಂಜನಾ ಕಲೆಯಾಗಿ ಬೆಳೆದುಬಂದಿತ್ತು. ಆದರೆ ಕ್ರಮೇಣ ದಾಸರು ಬೇರೆ ಬೇರೆ ವೃತ್ತಿಗಳನ್ನು ಕೈಗೊಂಡಿದ್ದರ ಫಲವಾಗಿ ದಾಸರಾಟವು ನಶಿಸುತ್ತಾ ಬಂದಿರುತದೆ.

## ದೊಡ್ಡಾಟ

ಉತ್ತರ ಕರ್ನಾಟಕದಲ್ಲಿ ಆಟ, ಬಯಲಾಟ, ಮೂಡಲಪಾಯದ ಆಟ ಮುಂತಾದ ಹೆಸರುಗಳಿಂದ ಗುರುತಿಸಲ್ಪಡುವ ರಂಗರೂಪವೇ ದೊಡ್ಡಾಟ. ಹೆಸರಿಗೆ ತಕ್ಕಂತೆ ಭವ್ಯತೆ." ಶ್ರೀಮಂತಿಕೆಯನ್ನು ಒಳಗೊಂಡಿರುವ ದೊಡ್ಡಾಟದಲ್ಲಿ ಭರ್ಜರಿ ವೇಷಭೂಷಣಗಳು, ಭವ್ಯವಾದ ರಂಗಸಜ್ಜಿಕೆ, ಗಂಡು ಕುಣಿತ, ಗಡಸು ಸಂಭಾಷಣೆ, ಕಾಳಗ ಮತ್ತು ಪರಿಣಯ ಪ್ರಧಾನ ಪ್ರಸಂಗಗಳು ಎಲ್ಲವೂ ಇವೆ. ಅಕ್ಷರ ಗೊತ್ತಿಲ್ಲದ ಗ್ರಾಮೀಣರು ದೊಡ್ಡಾಟದ ಪಾತ್ರಧಾರಿಗಳು.

ದೊಡ್ಡಾಟದ ಕಥಾವಸ್ತು ರಾಮಾಯಣ-ಮಹಾಭಾರತ- ಭಾಗವತಗಳಿಂದ ಆಯ್ದುಕೊಂಡದ್ದು. ಪ್ರಸಂಗಗಳಲ್ಲಿ ಬರುವ ಪಾತ್ರಗಳ ಘನತೆ, ಅಂತಸ್ತಿಗೆ ತಕ್ಕಂತೆ ಇಲ್ಲಿ. ವೇಷಧೂಷಣಗಳಿವೆ. ರಾಜರು, ಮಹಾರಾಜರು, ರಾಕ್ಷಸರು, ಯಕ್ಷ ಗಂಧರ್ವ

ಕಿನ್ನರ ಕಿಂಪುರುಷರು ಪ್ರಸಂಗಗಳಲ್ಲಿ ಬರುತ್ತಾರೆ. ಅವರುಗಳಿಗೆ ತಕ್ಕಂತೆ ವೇಷಭೂಷಣಗಳನ್ನು ಸಿದ್ಧಪಡಿಸಿರುತ್ತಾರೆ. ಹಗುರವಾದ ಕಟ್ಟಿಗೆಯಿಂದ ತಯಾರಿಸಿದ, ಸೋನರಿ ಅಥವಾ ಕೆಂಪುಬಣ್ಣದ ಹಾಳೆ ಮತ್ತು ಕನ್ನಡಿ ಚೂರುಗಳನ್ನು ಅಂಟಿಸಿ ದೀಪದ ಬೆಳಕಿಗೆ ಝಗಝಗಿಸುವ ಕಿರೀಟಗಳು, ಭುಜಕೀರ್ತಿ, ಕೈಕಟ್ಟು, ಎದೆಕಟ್ಟು, ಎದೆಹಾರ, ಕೊರಳಲ್ಲಿ ಬಣ್ಣಬಣ್ಣದ ಸರಗಳು, ಕೈಯಲ್ಲಿ ಖಡ್ಗ, ಬಿಲ್ಲು, ಬಾಣ, ಗದೆ, ಕಾಲಿಗೆ ಗೆಜ್ಜೆ, ಚೌಕಳಿ ಕೆಂಪು, ಕಪ್ಪು ಬಣ್ಣದ ಸೀರೆಗಳ ವೀರಗಚ್ಚೆ, ಭುಜದಿಂದ ನೆಲ ಮುಟ್ಟುವ ಹಾಗೆ ಬೆನ್ನಿನ ಹಿಂದೆ ಇಳಿಬಿಟ್ಟ ಬಣ್ಣದ ಬಟ್ಟೆ ಇತ್ಯಾದಿಗಳೆಲ್ಲವೂ ಗಂಡು ಪಾತ್ರಗಳ ಸಾಮಾನ್ಯ ವೇಷಭೂಷಣಗಳು. ಸ್ತ್ರೀಪಾತ್ರಗಳು ಭರ್ಜರಿ ಪೀತಾಂಬರ ಉಟ್ಟು, ಕೈತುಂಬ ಬಳೆ, ಕೊರಳ ತುಂಬ ಸರ, ಮುತ್ತಿನಹಾರ, ಕಾಲಿಗೆ ಗೆಜ್ಜೆ ಧರಿಸಿ, ಕೈಯಲ್ಲಿ ಬಣ್ಣದ ವಸ್ತ್ರ ಹಿಡಿದಿರುತ್ತವೆ. ದೊಡ್ಡಾಟದ ಪ್ರಮುಖ ಪಾತಧಾರಿಯಾದ ಸಾರಥಿ ಬಣ್ಣದ ನಲುವಂಗಿ, ತಲೆಗೆ ಶಂಕುವಿನ ಆಕಾರದ ಬಣ್ಣದ ಟೊಪ್ಪಿಗೆ. ಮುಖದ ಮೇಲೆ ಬಿಳಿಯ ಚುಕ್ಕೆಗಳ ವಿನ್ಯಾಸ, ಕೊರಳಲ್ಲಿ ಸರ, ಕೈಯಲ್ಲೊಂದು ಬೇವಿನ ಟೊಂಗೆ ಇಲ್ಲವೆ ದೊಣ್ಣೆ ಹಿಡಿದಿರುತ್ತಾನೆ.

ದೊಡ್ಡಾಟದ ರಂಗಮಂಟಪವು ಭವ್ಯವಾದುದು, ಗಟ್ಟಿಮುಟ್ಟಾದುದು ಆಗಿರುತ್ತದೆ. ಎತ್ತಿನ ಗಾಡಿಯ ಚಕ್ರಗಳನ್ನು ಹುಗಿದು, ತೊಲೆಗಳನ್ನು ಜೋಡಿಸಿ, ಅದರ ಮೇಲೆ ಹಲಗೆಗಳನ್ನು ಹಾಕುತ್ತಾರೆ. ಹಿಂಬದಿಗೆ. ಗುಡಾರ ಹಾಕಿ ಮುಚ್ಚುತ್ತಾರೆ. ಇದರ ಹಿಂದೆ ಪಾತ್ರಧಾರಿಗಳು ವೇಷಭೂಷಣಗಳನ್ನು ತೊಟ್ಟು ತಯಾರಾಗಲು ಬಣ್ಣದ ಚೌಕಿ ಇರುತ್ತದೆ. ಅಟ್ಟದ ಮುಂಭಾಗ ಮತ್ತು ಎಡಬಲಗಳು ತೆರೆದುಕೊಂಡಿರುತ್ತವೆ. ಮೇಲುಭಾಗದಲ್ಲಿ ಚಪ್ಪರ ಹಾಕಿರುತ್ತಾರೆ.

ದೊಡ್ಡಾಟದಲ್ಲಿ ಅಭಿನಯಕ್ಕಿಂತ ಕುಣಿಯುವುದೇ ಪ್ರಧಾನ. ರೌದ್ರಪಾತ್ರಗಳು ಮೇಲಿಂದ ಮೇಲೆ ವೀರಾವೇಶದಿಂದ ಕುಣಿಯುತ್ತವೆ. ಎತ್ತರಕ್ಕೆ ಜಿಗಿದು ನೆಲಕ್ಕೆ ಅಪ್ಪಳಿಸುವಂಥ ಪದಗತಿಗಳೇ ಹೆಚ್ಚು. ವೀರರಸವನ್ನು ಬಿಂಬಿಸುವ ಶಕ್ತಿಯುತವಾದ ಪದಾಘಾತಗಳಿವು. ಮೂರ್ಹೆಜ್ಜೆ, ಐದ್ಹೆಜ್ಜೆ, ಆರ್ಹೆಜ್ಜೆಗಳನ್ನು ಬಿಟ್ಟರೆ ಕುಣಿತಗಳ ಹೆಜ್ಜೆಗಳಲ್ಲಿ ಹೆಚ್ಚಿನ ವೈವಿಧ್ಯಗಳೇನೂ. ಇಲ್ಲ... ಕರಾವಳಿ ಯಕ್ಷಗಾನದಲ್ಲಿ ಕಂಡುಬರುವ ಮಧುರಭಾವವನ್ನು ಇಲ್ಲಿಯ ಕುಣಿತಗಳಲ್ಲಿ ಕಾಣಲು ಸಾಧ್ಯವಿಲ್ಲ. ಸಾರಥಿ ಮತ್ತು ಸ್ತ್ರೀ ಪಾತ್ರಗಳು ಲಘು ಕುಣಿತ ಮಾಡುತ್ತವೆ. ಭರ್ಜರಿಯಾದ ವೇಷಭೂಷಣಗಳನ್ನು ಧರಿಸಿ ಆರ್ಭಟಿಸುತ್ತಾ ಕುಣಿಯುವುದೇ ದೊಡ್ಡಾಟದ ವೈಶಿಷ್ಟ್ಯ.

ದೊಡ್ಡಾಟದಲ್ಲಿ ಮೃದಂಗ, ತಮಟೆ, ತಾಳ, ಮುಖವೀಣೆ, ಶ್ರುತಿಗಾಗಿ ಪುಂಗಿ ಇಲ್ಲವೆ ಹಾರ್ಮೋನಿಯಂ ಬಳಸುತ್ತಾರೆ. ಇಲ್ಲಿ ಬಳಸುವ ವಾದ್ಯಗಳಲ್ಲವೂ ಅಬ್ಬರದಿಂದ ಕೂಡಿದವುಗಳು. ಹಾಡುಗಾರಿಕೆಯಲ್ಲಿ ರಾಗಮಾಧದುರ್ಯವನ್ನು, ತಾಳಗಳ ಬಂಧುರತೆಯನ್ನು ಕಾಣಬಹುದು. ಒಂದೇ ಗೀತ ಬಂಧದಲ್ಲಿ ಮಧ್ಯಮ ದ್ರುತ ಧೀಮತ ಲಯ ಸಂಚಾರಗಳಿರುತ್ತವೆ. ಸ್ತ್ರೀಯರ ಹಾಡುಗಳಲ್ಲಿ ಸಂಭ್ರಮ, ವಿಭ್ರಮ, ಬೇಡಿಕೆ, ಕೋಪತಾಪ, ಪ್ರೀತಿಗಳನ್ನು ತೋರಲು ತಕ್ಕುದಾದ ರಾಗ ಸಹಿತ ಮಿತದ ಕಿರು ಆಲಾಪಗಳಿರುತ್ತವೆ. ಯುದ್ಧದ ಹಾಡುಗಳಲ್ಲಿಯ ಆವೇಶದ ತೀವ್ರಗತಿ, ಪರಸ್ಪರ ದೂಷಣೆ ಕ್ರೋಧಗಳ ಉದ್ಗಾರಗಳು ಭೀಷಣ ಸಮರದ ವಾತಾವರಣವನ್ನು ಕಲ್ಪಿಸುತ್ತವೆ. ಹಾಡು ತಾರಕಕ್ಕೇರಿದಾಗ ಹಿಮ್ಮೇಳ ದನಿಗೂಡಿ ಅದೇ ಸ್ತರದಲ್ಲಿ ನಿಲ್ಲುವುದು ದೊಡ್ಡಾಟದ ವಿಶೇಷ.

ದೊಡ್ಡಾಟಗಳಲ್ಲಿ ಹಿಮ್ಮೇಳವು ವೈವಿಧ್ಯಪೂರ್ಣವಾಗಿರುತ್ತದೆ. ರಂಗಮಂಟಪದ ಬಲ ಭಾಗದಲ್ಲಿ ಮೇಳದವರು ನಿಲ್ಲುತ್ತಾರೆ. ಇವರು ಆಟ ಮುಗಿಯುವವರೆಗೂ ಕೈಯಲ್ಲಿ ತಾಳ ಹಿಡಿದುಕೊಂಡು ನಿಂತೇ ಇರುತ್ತಾರೆ. ಹಿಮ್ಮೇಳದಲ್ಲಿ ಕನಿಷ್ಠ ನಾಲ್ಕರಿಂದ ಹತ್ತು ಮಂದಿಯವರೆಗೂ ಇರುತ್ತಾರೆ. ಭಾಗವತನ ಹಾಡಿನೊಂದಿಗೆ ಕೋಚು ಎತ್ತಿ ಹಾಡುವ ಹಿಮ್ಮೇಳದವರ ಸ್ವರ

ಆಲಾಪ ಕಿವಿ ತುಂಬುವಂಥಾದ್ದು ದೊಡ್ಡಾಟದ ಸಂಭಾಷಣೆಯು ಸಂಸ್ಕೃತಭೂಯಿಷ್ಠವಾದುದು. ಆಶು ಸಂಭಾಷಣೆಗೆ ಅವಕಾಶವಿಲ್ಲ. ಅದಿ ಪ್ರಾಸ-ಅಂತ್ಯ ಪ್ರಾಸವುಳ್ಳ ಸಂಭಾಷಣೆ. ಉದ್ದುದ್ದ ವಾಕ್ಯಗಳು. ಕೃಷಿಕಾಯಕ ನಿರತ ಗ್ರಾಮೀಣರು ನಾಲಿಗೆಗೆ ಒಗ್ಗದ ಮಾತುಗಳನ್ನು ಬಾಯಿಪಾಠ ಮಾಡಿ ಒಂದೇ ಉಸಿರಿನಲ್ಲಿ ಪಾಠ ಒಪ್ಪಿಸುವಂತೆ ಒಪ್ಪಿಸಿಬಿಡುವುದರಿಂದ ಇಲ್ಲಿ ಅಭಿನಯಕ್ಕೆ ಅವಕಾಶವೇ ಇರುವುದಿಲ್ಲ. ಅಭಿನಯವನ್ನು ಪ್ರೇರೇಪಿಸುವಂಥ ರಂಗಭಾಷೆ ಇಲ್ಲವಾದ್ದರಿಂದ ಪಾತ್ರಗಳ ಮಧ್ಯೆ ಭಾವನಾತ್ಮಕ ಸಂಬಂಧ ಇರುವುದಿಲ್ಲ.

ರಾಮಾಯಣ, ಮಹಾಭಾರತ, ದೇವಿಪುರಾಣಗಳಿಂದ ಆಯ್ದ ಕಥೆಗಳೇ ದೊಡ್ಡಾಟ ಪ್ರಸಂಗಗಳ ಕಥಾವಸ್ತು. ಕಾಳಗ ಪ್ರಸಂಗಗಳು ಕಡ್ಡಾಯ. ಪರಿಣಯ ಫಲವಾಗಿ ಕಾಳಗ, ಕಾಳಗದ ಫಲವಾಗಿ ಪರಿಣಯ. ಸುಭದ್ರಾ ಪರಿಣಯ, ರತಿ ಕಲ್ಯಾಣ, ಕರ್ಣಾರ್ಜುನರ ಕಾಳಗ, ಇಂದ್ರಜಿತು ಕಾಳಗ, ಭೀಮ ವಿಲಾಸ, ತ್ರಿಪುರ ಸಂಹಾರ ಇತ್ಯಾದಿ. ದೊಡ್ಡಾಟವು ಭವ್ಯತೆಯಲ್ಲಿ ಗೋಳಗುಮ್ಮಟವಿದ್ದಂತೆ ಎಂದು ವಿದ್ವಾಂಸರು ವರ್ಣಿಸಿದ್ದಾರೆ. ಆ ಭವ್ಯತೆ ಇತ್ತೀಚೆಗೆ ನಶಿಸುತ್ತಾ ಬಂದಿದೆ.

## ಮೂಡಲಪಾಯ ಯಕ್ಷ ಗಾನ

ಕರ್ನಾಟಕ ಜನಪದ ರಂಗಭೂಮಿಯಲ್ಲಿ ಯಕ್ಷಗಾನವು ಅತ್ಯಂತ ವರ್ಣರಂಜಿತವಾದ ಪ್ರಕಾರ. ಗೀತ, ಸಂಗೀತ, ಅಭಿನಯ, ಕುಣಿತ, ವೇಷಭೂಷಣ, ಮುಖವರ್ಣಿಕೆಗಳನ್ನು ಒಳಗೊಂಡ ಗ್ರಾಮೀಣ ಮನರಂಜನಾ ರಂಗರೂಪ. ಕರಾವಳಿ ಪ್ರದೇಶದಲ್ಲಿ ಕಂಡುಬರುವ ಈ ರೂಪವನ್ನು ಪಡುವಲಪಾಯ ಯಕ್ಷಗಾನ ಎಂದು ಕರೆದರೆ, ಬಯಲುಸೀಮೆಯಲ್ಲಿ ಮೂಡಲಪಾಯ ಯಕ್ಷಗಾನ ಎಂದು ಕರೆಯುತ್ತಾರೆ. ಒಂದು ಕಾಲಕ್ಕೆ ಕರ್ನಾಟಕದ ಹದಿನಾಲ್ಕು ಜಿಲ್ಲೆಗಳಲ್ಲಿ ವ್ಯಾಪಕವಾಗಿ ಹಬ್ಬಿ ಹರಡಿದ್ದ ಮೂಡಲಪಾಯ ಯಕ್ಷಗಾನವು ಕಾಲಕ್ರಮೇಣ ಪ್ರೋತ್ಸಾಹಿಸುವವರಿಲ್ಲದೆ ಕ್ಷೀಣಿಸುತ್ತಾ ಬಂದಿದ್ದು. ಮಂಡ್ಯ, ತುಮಕೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಮಾತ್ರ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುತ್ತದೆ.

ಮೂಡಲಪಾಯ ಯಕ್ಷಗಾನದ ಇತಿಹಾಸವು ಸುಮಾರು ೫೦೦ ವರ್ಷಗಳಷ್ಟು ಹಿಂದಿನದು ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಕೆಂಪಣ್ಣಗೌಡ ಎಂಬ ಕವಿಯು ರಚಿಸಿರುವ ಕರಿಬಂಟ ಯಕ್ಷಗಾನ ಕೃತಿ ೧೪೮೦ರಷ್ಟು ಪ್ರಾಚೀನವಾದುದೆಂಬ ಅಭಿಪ್ರಾಯವಿದೆ. ಭರ್ಜರಿ ವೇಷಭೂಷಣಗಳು, ಭವ್ಯವಾದ ರಂಗಸಜ್ಜಿಕೆ, ಗಂಡು ಕುಣಿತ, ಗಡಸು ಸಂಭಾಷಣೆ, ಕಾಳಗ ಮತ್ತು ಪರಿಣಯ ಪ್ರಧಾನ ಪ್ರಸಂಗಗಳು ಮೂಡಲಪಾಯದಲ್ಲಿವೆ. ಅಕ್ಷರ ಗೊತ್ತಿಲ್ಲದ. ಗ್ರಾಮೀಣರು. ಮೂಡಲಪಾಯ ಯಕ್ಷಗಾನದಲ್ಲಿನ ಪಾತ್ರಧಾರಿಗಳು.

ಮೂಡಲಪಾಯ ಯಕ್ಷಗಾನವನ್ನು ಹಬ್ಬ ಹರಿದಿನಗಳು, ಜಾತ್ರೆ ಉತ್ಸವಗಳು ಮತ್ತು ಸುಗ್ಗಿಯ ನಂತರದ ಬಿಡುವಿನ ದಿನಗಳಲ್ಲಿ ಪ್ರದರ್ಶಿಸುತ್ತಾರೆ. ಇದು ಶುದ್ಧ ಹವ್ಯಾಸಿ ಕಲೆ. ಭಾಗವತ ಮಾತ್ರ ವೃತ್ತಿಪರನಾಗಿರುತ್ತಾನೆ. ಆಟಕ್ಕೆ ಮೂರ್ನಾಲ್ಕು ತಿಂಗಳುಗಳ ಮೊದಲೇ ಹಿರಿಯರ ಸಮ್ಮುಖದಲ್ಲಿ ಸಭೆ ಸೇರಿ ಯಾವ ಆಟ ಆಡಬೇಕೆಂಬುದರ ಬಗ್ಗೆ ತೀರ್ಮಾನ ತೆಗೆದುಕೊಂಡು ಭಾಗವತರನ್ನು ಕರೆಸಿ ಅವರಿಂದ ತಾಲೀಮು ಪ್ರಾರಂಭಿಸುತ್ತಾರೆ. ಪ್ರದರ್ಶನಕ್ಕೆ ಆಯ್ದುಕೊಳ್ಳುವ ಪ್ರಸಂಗದಲ್ಲಿ ಬರುವ ಪಾತ್ರಗಳನ್ನು ಹಂಚಿಕೊಂಡು ಕಲಿಯಲಾರಂಭಿಸುತ್ತಾರೆ. ಕಲಿಕೆಯ ಜತೆ ಜತೆಗೇ ಪಾತ್ರಗಳಿಗೆ ಬೇಕಾದ ವೇಷಭೂಷಣಗಳನ್ನು ಸಿದ್ಧಪಡಿಸಿಕೊಳ್ಳುತ್ತಾರೆ.

ಸಾಮಾನ್ಯವಾಗಿ ಮೂಡಲಪಾಯ ಯಕ್ಷಗಾನದ ಪ್ರತಿಯೊಂದು ಪ್ರಸಂಗದಲ್ಲ ನಾಲ್ಕು ವಿಧದ ಪಾತ್ರಗಳಿರುತ್ತವೆ. ರಾಜ ಪಾತ್ರಗಳು, ರಾಕ್ಷಸ ಪಾತ್ರಗಳು, ಸ್ತ್ರೀ ಪಾತ್ರಗಳು ಮತ್ತು ಸಾಮಾನ್ಯ ಪಾತ್ರಗಳು. ಮೂಡಲಪಾಯದ ರಾಕ್ಷಸ ಪಾತ್ರಗಳ ವೇಷಭೂಷಣಗಳು ಭರ್ಜರಿಯಾದವು ಮತ್ತು ಆಕರ್ಷಣೀಯವಾದುವು. ಕಪ್ಪು-ಕೆಂಪು ಮಿಶ್ರಿತವಾದ ಪಟ್ಟೆ ಪಟ್ಟೆಯ ಅಗಲವಾದ, ಹೆಚ್ಚು ನೆರಿಗೆಗಳುಳ್ಳ ಲಂಗ, ಕೆಂಪು ರವಿಕೆ. ಕೊರಳಿಗೆ ದಪ್ಪ ಮಣಿಗಳ ಸರ, ಕೈಗೆ ಅಗಲವಾದ ಬಳೆ, ಬಿಳಿಯ ಕೋರೆ ಹಲ್ಲು, ಮುಖಕ್ಕೆ ಬಳಿಯುವ ಕೆಂಪು, ಕಪ್ಪು ಅಥವಾ ಹಸಿರು ಬಣ್ಣ, ಅದರ ಮೇಲೆ ಇಡುವ ಬಿಳಿಯ ಬಣ್ಣದ ಚುಕ್ಕೆಗಳು, ಅತೀ ದಟ್ಟವಾದ ಕೂದಲ ರಾಶಿಯನ್ನು ಹಿಂಭಾಗ ಮತ್ತು ಮುಂಭಾಗದಲ್ಲಿ ಹರಡಿಕೊಳ್ಳುವುದು. ಅದರ ಮೇಲೆ ಬಿದಿರಿನ ಬುಟ್ಟಿಯಂತೆ ಹೆಣೆದು ಕನ್ನಡಿ ಚೂರುಗಳಿಂದ ಅಲಂಕರಿಸಿದ ಕುಕ್ಕೆಯಾಕಾರದ ಕುಂದಲಿಗೆ ಕಿರೀಟ, ಅತಿಯಾಗಿ ತುಂಬಿದ ಎದೆ ಇವಿಷ್ಟು ರಾಕ್ಷಸ ಪಾತ್ರಗಳ ಅದರಲ್ಲೂ ರಾಕ್ಷಸಿಯರ ವೇಷಭೂಷಣಗಳು.

ರಾಜಪಾತ್ರಗಳು, ಜರಿಯ ನಿಲುವಂಗಿ ಧರಿಸಿ, ವೀರಗಚ್ಚೆ ಹಾಕಿ ಕಾಲಿಗೆ ಕಾಲಂದಿಗೆ, ಗೆಜ್ಜೆ. ಮುಂಗೈಗೆ ಕಡಗ ಅಥವಾ ಕಪ್ಪ, ಭುಜಕೀರ್ತಿ, ಎದೆಹಾರ, ಕೊರಳು, ತೋಳು, ಮುಂಗೈ ಕಟ್ಟು, ಎದೆ ಕಟ್ಟು ಧರಿಸುತ್ತವೆ. ಭುಜಕೀರ್ತಿಗಳು ಆಕಾರದಲ್ಲಿ ದೊಡ್ಡದಾಗಿದ್ದು, ಯಕ್ಷ-ಕಿನ್ನರರು ಹಾರಿ ಬರಲು ಹೊಂದಿರುವ ರೆಕ್ಕಗಳ ಕಲ್ಪನೆಯನ್ನುಂಟು ಮಾಡುತ್ತವೆ. ಎದೆಹಾರವು ಪಾತ್ರಗಳಿಗೆ ಮೆರುಗು ತರುತ್ತದೆ. ಭುಜಕೀರ್ತಿ ಮತ್ತು ಎದೆಹಾರಗಳನ್ನು ಮರದಿಂದ ತಯಾರಿಸಿ ಅದಕ್ಕೆ ಚಿನ್ನದ ಮೆರುಗಿನ ಸುನೇರಿ, ಕನ್ನಡಿಯ ಚೂರು, ಹೊಳೆಯುವ ಜೀರುಂಬೆ ರೆಕ್ಕೆಗಳನ್ನು ಅಂಟಿಸಿರುತ್ತಾರೆ. ಕಿರೀಟ ಧಾರಿಗಳಾಗಿರುತ್ತಾರೆ. ಭೀಮ-ದುರ್ಯೋಧನ ಮೊದಲಾದ ಪಾತ್ರಗಳಿಗೆ, ಅವರ ರೌದ್ರತೆಗೆ ರಂಗು ತರಲು ಕೆಂಪು ಬಣ್ಣವನ್ನು ಉಳಿದಂತೆ ಹಳದಿ ಬಣ್ಣವನ್ನು ಮುಖಕ್ಕೆ ಹಚ್ಚಿರುತ್ತಾರೆ.

ಸ್ತ್ರೀ ಪಾತ್ರಗಳು ಜರಿಯ ಸೀರೆ ಕುಪ್ಪಸ ಧರಿಸಿ ತಲೆಯ ಹಿಂಭಾಗದಲ್ಲಿ ಕೂದಲಿನ ಗಂಟು ಹಾಕಿದ್ದು. ಆ ನಂಟಿನ ಮೇಲೆ ಅರ್ಧ ಚಂದ್ರಾಕಾರದಲ್ಲಿ ಹೂ ಮುಡಿಯುವುದರೊಂದಿಗೆ ಪ್ರಭಾವಳಿ ಕಿರೀಟ ಧರಿಸುತ್ತಾರೆ. ಬೈತಲೆ ಬಟ್ಟು, ಸೊಂಟಕ್ಕೆ ಡಾಬು, ತೋಳು, ಮುಂಗೈ ಮಣಿಕಟ್ಟುಗಳಿಗೆ ತೋಳಬಂದಿ, ಕಡಗಗಳನ್ನು ಧರಿಸಿರುತ್ತಾರೆ. ಸಾಮಾನ್ಯ ಪಾತ್ರಗಳಿಗೆ ಹೆಚ್ಚಿನ ಆಭರಣ ವಿಶೇಷಗಳಿರುವುದಿಲ್ಲ. ಸಾದಾ ಉಡುಗೆ ತೊಡಿಗೆಗಳಿರುತ್ತವೆ.

ಪಡುವಲಪಾಯವು ಶಿಷ್ಟ ಜನ ಸೃಷ್ಟಿಯಾದರೆ, ಮೂಡಲಪಾಯವು ಜನಪದರ ಸೃಷ್ಟಿ. ಇಲ್ಲಿನ ಪಾತ್ರಧಾರಿಗಳು ಅಕ್ಷರ ಜ್ಞಾನವಿಲ್ಲದವರು. ಜ್ಞಾಪಕ ಶಕ್ತಿ ಮತ್ತು ಕಲೆಯ ಆಸಕ್ತಿಗಳೆರಡೇ ಇವರ ಬಂಡವಾಳ. ಭಾಗವತರೂ ಸಹ ಅಪ್ಪ. ಅಷ್ಟಿಷ್ಟು ಓದು ಬರಹಬಲ್ಲವರು; ಇಲ್ಲವಾದರೆ ಅದೂ ಇಲ್ಲ. ಕೇವಲ ನೆನಪಿನ ಆಧಾರದ ಮೇಲೆ ಯಕ್ಷಗಾನ ಪ್ರಸಂಗಗಳನ್ನು ಕಲಿಸಿ ಆಡಿಸುವವರು. ಸಂಭಾಷಣೆ ಸಂಸ್ಕೃತಭೂಯಿಷ್ಠವಾದುದು. ಉದ್ದುದ್ದ ವಾಕ್ಯಗಳು, ಆದಿ ಪ್ರಾಸ ಅಚಿಂತ್ಯ ಪ್ರಾಸವುಳ್ಳ ಗಡುಸು ಸಂಭಾಷಣೆ. ಪಾತ್ರಧಾರಿಗಳು ನಾಲಿಗೆಗೆ ಒಗ್ಗದ ಮಾತುಗಳನ್ನು ಬಾಯಿಪಾಠ ಮಾಡಿ ಒಂದೇ ಉಸಿರಿನಲ್ಲಿ ಪಾಠ ಒಪ್ಪಿಸುವಂತೆ ಒಪ್ಪಿಸುತ್ತಾರೆ. ಆದರೆ ಮೂಡಲಪಾಯ ಸಂಗೀತ ಪರಂಪರೆ. ಮಾತ್ರ ಅದ್ಭುತ ಸತ್ವವನ್ನುಳ್ಳದ್ದು. ದಕ್ಷಿಣಾದಿ ಪರಂಪರೆಯನ್ನು ಅನುಸರಿಸುವ ಈ ಸಂಗೀತ ಪದ್ಧತಿಯಲ್ಲಿ ಉತ್ತಮ ಸಂಗೀತಜ್ಞಾನವುಳ್ಳ ಭಾಗವತರು ಇದ್ದಾರೆ. ಇಡೀ ರಾತ್ರಿ ಹಿಮ್ಮೇಳದೊಂದಿಗೆ ಭಾಗವತರು ನಿಂತುಕೊಂಡೇ ಪ್ರಸಂಗ ನಡೆಸಿಕೊಡುತ್ತಾರೆ.

ಮೂಡಲಪಾಯ ಯಕ್ಷಗಾನದಲ್ಲಿ ಮೃದಂಗ, ತಾಳ, ಮುಖವೀಣೆ ಮತ್ತು ಹಾರ್ಮೋನಿಯಂ ವಾದ್ಯಗಳನ್ನು ಬಳಸುತ್ತಾರೆ. ಮುಖವೀಣೆಯು ಪ್ರದರ್ಶನದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಪಡುವಲಪಾಯ ಯಕ್ಷಗಾನದಲ್ಲಿ ಚಂಡೆ ವಾದ್ಯವು ಉಂಟು

ಮಾಡುವ ಪರಿಣಾಮವನ್ನು ಮೂಡಲಪಾಯದಲ್ಲಿ ಗೇಣುದ್ದದ ಗಾಳಿ ವಾದ್ಯವಾದ ಮುಖವೀಣೆಯು ತಂದುಕೊಡುತ್ತದೆ. ಬಾಗವತನ ಆಲಾಪನೆಯೊಂದಿಗೆ ಕೂಡಿಕೊಳ್ಳುವ ಮತ್ತು ಹಾಡಿನ ಅಂತ್ಯಕ್ಕೆ ತಂದುಕೊಡುವ ಸೊಗಸು ಅದ್ಭುತವಾದುದು.

ಮೂಡಲಪಾಯದಲ್ಲಿ 'ಕೋಡಂಗಿ' ಹನುಮಂತನಾಯಕನದು ಪ್ರಧಾನ ಪಾತ್ರ, ಪಾತ್ರಗಳನ್ನು ರಂಗಕ್ಕೆ ಕರೆತರುವುದು, ವಿಶಿಷ್ಟವಾಗಿ ವ್ಯಾಖ್ಯಾನಿಸುವುದರ ಮೂಲಕ ಪ್ರೇಕ್ಷಕರಿಗೆ. ಪರಿಚಯಿಸುವುದು, ರಂಗದಲ್ಲಿ ತಮಾಷೆ, ಗೇಲಿ, ನಕಲಿಯಿಂದ ಏಕತಾನತೆಯನ್ನು ನಿವಾರಿಸಿ, ಹಾಸ್ಯವನ್ನು ಪ್ರಚೋದಿಸಿ, ಪ್ರೇಕ್ಷಕರಲ್ಲಿ ಲವಲವಿಕೆಯನ್ನು ತುಂಬುತ್ತಾನೆ.

ರಾಮಾಯಣ, ಮಹಾಭಾರತ, ಭಾಗವತಗಳಿಂದ ಆಯ್ದ ಕಥೆಗಳೇ ಮೂಡಲಪಾಯ ಯಕ್ಷಗಾನ ಪ್ರಸಂಗಗಳ ಕಥಾ ವಸ್ತು. ಹೆಚ್ಚಾಗಿ ವೈಷ್ಣವ ಸಂಬಂಧಿ ಪ್ರಸಂಗಗಳು. ಅಪರೂಪಕ್ಕೆ ಶೈವ ಮತ್ತು ಜನಪದ ಪ್ರಸಂಗಗಳಿವೆ. ಕಾಳಗದ ಪ್ರಸಂಗಗಳೇ ಹೆಚ್ಚು, ಪಂಚವಟಿ ರಾಮಾಯಣ, ರಾಮಾಂಜನೇಯ ಭಾಳಗ, ಗಯ ಚರಿತ್ರೆ, ದೇವಿ ಕಥೆ, ರತಿ ಕಲ್ಯಾಣ ಇತ್ಯಾದಿ.

## ಯಕ್ಷಗಾನ

ಕರ್ನಾಟಕವನ್ನು ಸಾಂಸ್ಕೃತಿಕವಾಗಿ ಅಂತರಾಷ್ಟ್ರೀಯ ಮಟ್ಟಕ್ಕೆ ಪರಿಚಯಿಸಿದ್ದು ಯಕ್ಷಗಾನ ಕಲೆ ಯಕ್ಷಗಾನವು ಬರಿಯ ಗಾನವಲ್ಲ. ನಾಟ್ಯ, ಗೀತ, ಗಾನ, ವಾದ್ಯ ಬಣ್ಣ ಬೇಗಡೆಗಳಿಂದ ಸಂಪೂರ್ಣವು. ಸಮೃದ್ಧವೂ ಆದ ಸಮಷ್ಟಿ ಕಲೆ. ಸಂಗಿತದಿಂದ ಕಿವಿಗೆ ಇಂಪನ್ನು, ಚಿತ್ರವಿಚಿತ್ರ ಮುಖವರ್ಣಿಕೆ ಮತ್ತು ಸುಂದರ ವೇಷಭೂಷಣಗಳಿಂದ, ಕ್ರಮಬದ್ಧವಾದ ನಾಟ್ಯದಿಂದ ಕಣ್ಣಿಗೆ ಸೊಂಪನ್ನು, ಧರ್ಮಬೋದಧನೆಯಿಂದ ಮನಸಿಗೆ ತಂಪನ್ನು ತಂದುಕೊಡುವ ವಿಶಿಷ್ಟ ಕಲೆ ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಯಕ್ಷಗಾನದಲ್ಲಿ ಮೂರು ಪ್ರಬೇಧಗಳಿವೆ. ಉಡುಪಿಯಿಂದ ದಕ್ಷಿಣಕ್ಕೆ ಮಂಗಳೂರಿನವರೆಗಿನ ಸಂಪ್ರದಾಯವನ್ನು ತೆಂಕುತಿಟ್ಟು ಎಂದು ಉಡುಪಿಯಿಂದ ಭಟ್ಕಳದವರೆಗಿನ ಸಂಪ್ರದಾಯವನ್ನು ಬಡಗುತಿಟ್ಟು ಎಂದು, ಭಟ್ಕಳದಿಂದ ಕಾರವಾರದ ಗಡಿಯವರೆಗಿನ ಸಂಪ್ರದಾಯವನ್ನು ಬಡಬಡಗುತಿಟ್ಟು ಎಂದು ಕರೆಯುತ್ತಾರೆ. ಪ್ರಭೇದಗಳು ಏನೇ ಇರಲಿ ಯಕ್ಷಗಾನವು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಗಳೆರಡರಲ್ಲೂ ಸಮೃದ್ಧವಾಗಿ ಹಬ್ಬಿ ಹರಡಿದೆ.

ಯಕ್ಷಗಾನದಲ್ಲಿ ಜಾಗಟೆ, ಚಂಡೆ, ಮದ್ದಳೆ, ಚಕ್ರತಾಳ ಮೊದಲಾದ ವಾದ್ಯಗಳು ಹಿಮ್ಮೇಳವನ್ನು ಒದಗಿಸುತ್ತವೆ. ಬಣ್ಣದ ವೇಷ ಯಕ್ಷಗಾನದ ಅದ್ಭುತಸೃಷ್ಟಿ... ಯಕ್ಷಗಾನದ ಮೂರು ಪ್ರಬೇದಗಳಲ್ಲಿನ ವೇಷಭೂಷಣಗಳಲ್ಲಿ ವ್ಯತ್ಯಾಸಗಳಿವೆ. ಇವುಗಳಲ್ಲಿ ತಲೆಗೆ ಧರಿಸುವ ಪಗಡಿ, ಕಿರೀಟ, ಕೇದಿಗೆ ಮುಡಿಗಳು ಅತ್ಯಾಕರ್ಷಕವಾದವು. ಕುಣಿತದಲ್ಲಿಯೂ ವ್ಯತ್ಯಾಸಗಳಿದ್ದು ದಾಪುಗಾಲಿನ ಕುಣಿತಗಳು, ಲಾಸ್ಯ, ತಿರುಗುವಿಕೆ, ಗಿರಕಿ ಹೊಡೆಯುವುದು, ಕುಪ್ಪಳಿಸುವುದು, ಚಂಗನೆ ಹಾರಿ ಪ್ರದಕ್ಷಿಣೆ ಹಾಕಿ ನೆಲದ ಮೇಲೆ ಹೆಬ್ಬೆರಳೂರಿ ನಿಲ್ಲುವುದು, ಮಂಡಿ ಮತ್ತು ಪಾದಗಳ ಸಹಾಯದಿಂದ ಸುತ್ತುವುದು ಇತ್ಯಾದಿಗಳು ಕಂಡುಬರುತ್ತವೆ.

ಕರಾವಳಿ ಯಕ್ಷಗಾನ ಸಾಹಿತ್ಯದಲ್ಲಿ ಪ್ರಸಂಗ ಸಾಹಿತ್ಯ ಮತ್ತು ಪ್ರದರ್ಶನದ ಸಂದರ್ಭದಲ್ಲಿ ಪಾತ್ರಧಾರಿ ಹೇಳುವ ಅರ್ಥ ಎಂದು ಎರಡು ವಿಧವಿದೆ. ಪ್ರಸಂಗ ಸಾಹಿತ್ಯದ ಮೇಲೆ ಗದುಗಿನ ಭಾರತ, ಜೈಮಿನಿ ಭಾರತ, ತೊರವೆ ರಾಮಾಯಣದಂತಹ ನಡುಗನ್ನಡ ಕೃತಿಗಳ ಪ್ರಭಾವ ಹೆಚ್ಚಾಗಿದೆ. ಪಾತ್ರಧಾರಿಗಳು ಸುಶಿಕ್ಷಿತರು, ವಿದ್ಯಾವಂತರಾಗಿದ್ದು ಆಶುಕವಿಗಳು. ಪ್ರದರ್ಶನ

ಸಂದರ್ಭದಲ್ಲೇ ಸನ್ನಿವೇಶಕ್ಕೆ ತಕ್ಕಂತೆ ತಮ್ಮ ಸೃಜನಶೀಲತೆ, ಕಲ್ಪನಾ ಚಾತುರ್ಯದಿಂದ ಸಂಭಾಷಣೆಯನ್ನು ಸೃಷ್ಟಿಸಿಕೊಂಡು ಹೇಳುತ್ತಾರೆ. ಇಲ್ಲಿನ ಸಂಭಾಷಣೆ ಮೂಡಲಪಾಯದಂತೆ. ಉರು ಹೊಡೆದ ಸಂಭಾಷಣೆಯಲ್ಲ. ಸಂಗೀತವು ಯಕ್ಷಗಾನದ ಜೀವಾಳ. ಉತ್ತರಾದಿ ಮತ್ತು ದಕ್ಷಿಣಾದಿ ಸಂಗೀತದ ಹಲವು ಬಗೆಯ ರಾಗಗಳು ಈ ಸಂಗೀತದಲ್ಲಿವೆ. ಇಲ್ಲಿಯ ಸಂಗೀತಕ್ಕೆ ಅದರ ಸಾಹಿತ್ಯದಲ್ಲಿನ ಛಂದಸ್ಸುಗಳೇ ಮೂಲಾಧಾರ.

ಯಕ್ಷಗಾನದಲ್ಲಿ ಬಣ್ಣಗಾರಿಕೆ ಮತ್ತು ವೇಷಭೂಷಣಗಳು ಪ್ರಧಾನ ಪಾತ್ರ ವಹಿಸುತ್ತವೆ. ರಾಜವೇಷಗಳು, ರಾಕ್ಷಸವೇಷಗಳು, ಸ್ತ್ರೀವೇಷಗಳು, ಸಾಮಾನ್ಯ ವೇಷಗಳಿವೆ. ಆಯಾ ವೇಷಗಳಿಗೆ ತಕ್ಕಂತೆ ತಪ್ಪು ಕೆಂಪು, ಹಸಿರು, ಹಳದಿ ಬಣ್ಣಗಳನ್ನು ಮುಖವರ್ಣಿಕೆಗೆ ಬಳಸುತ್ತಾರೆ. ಕಿರೀಟದಲ್ಲಿ ಮುಂಡಾಸು, ಪಗಡಿ, ಕೋಲು ಕಿರೀಟ, ರಾಜಕಿರೀಟ, ಭೀಮನ ಮುಡಿ, ಹನುಮಂತನ ಕಿರೀಟ, ಬಣ್ಣದ ವೇಷ ಅಂದರೆ ರಾಕ್ಷಸ ಪಾತ್ರದ ಕಿರೀಟ ಇತ್ಯಾದಿ ಪ್ರಕಾರಗಳಿವೆ.

ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಅಸಂಖ್ಯಾತ ಯಕ್ಷಗಾನ ಮೇಳಗಳಿವೆ. ಯಕ್ಷಗಾನದ ಪಾತ್ರಧಾರಿಗಳನ್ನು ಒಳಗೊಂಡಂತೆ ಎಲ್ಲಾ ಪರಿಕರಗಳನ್ನು ಹೊಂದಿರುವ ಈ ಮೇಳಗಳು ದೇವರ ಸನ್ನಿಧಿಯಲ್ಲಿ ಮತ್ತು ಕರೆದಲ್ಲಿಗೆ ಹೋಗಿ ಆಟ ಆಡಿ ಬರುತ್ತವೆ.

ಸಾಮಾನ್ಯವಾಗಿ ದಶಾವತಾರದ ಆಟಗಳನ್ನು ಆಡುವುದರ ಜೊತೆಗೆ ಭೂತಾರಾಧನೆಯ ಕಥೆಗಳು, ಐತಿಹಾಸಿಕ ಕಥೆಗಳು, ಸಾಮಾಜಿಕ ವಿಷಯಗಳನ್ನು ಪ್ರಸಂಗಗಳ ವಸ್ತುವನ್ನಾಗಿ ಆಯ್ದುಕೊಂಡು ಪ್ರದರ್ಶನ ನೀಡುತ್ತವೆ. ಇತ್ತೀಚೆಗೆ ಕರಾವಳಿ ಯಕ್ಷಗಾನದ ಮೇಲೆ ಸಿನಿಮಾಗಳ ಪ್ರಭಾವ ಹೆಚ್ಚಾಗುತ್ತಿದೆ.

## ಸಣ್ಣಾಟ

ಬೆಳಗಾವಿ ಜಿಲ್ಲೆ ಸಣ್ಣಾಟಗಳ ತವರುಮನೆ. ಸುಮಾರು ೧೬೦ ವರ್ಷಗಳಿಂದೀಚೆಗೆ ಬೆಳೆದು ಬಂದ ಸಣ್ಣಾಟವನ್ನು ಹುಟ್ಟು ಹಾಕಿ, ಉಳಿಸಿ, ಬೆಳೆಸುವಲ್ಲಿ ಬೆಳಗಾವಿ ಜಿಲ್ಲೆಯ ಕೊಡುಗೆ ಅನನ್ಯವಾದುದು. ಉತ್ತರ ಕರ್ನಾಟಕದ ಜನಪದ ರಂಗಭೂಮಿಯಲ್ಲಿ ದೊಡ್ಡಾಟ ಪ್ರಕಾರಕ್ಕೆ ಪ್ರತಿಯಾಗಿ ಹುಟ್ಟಿಕೊಂಡ ರಂಗ ಪ್ರಕಾರವೇ ಸಣ್ಣಾಟ. ದೊಡ್ಡಾಟದ ಭವ್ಯತೆ, ಶ್ರೀಮಂತಿಕೆ, ಪ್ರದರ್ಶನದ ಅವಧಿ, ಭಾರೀ ವೆಚ್ಚದ ಹೊಡೆತಗಳನ್ನು ಸಹಿಸಿಕೊಳ್ಳಲು ಸಾಧ್ಯವಾಗದಿದ್ದಾಗ ರಂಗಭೂಮಿಯ ಬಗ್ಗೆ ಕಳಕಳಿಯುಳ್ಳ ಪತ್ತಾರ ಮಾಸ್ತರ, ಇಂಚಲದ ಕೆಂಚನಾಯ್ಕು, ಹುಲಕುಂದದ ಚನ್ನಬಸಪ್ಪ, ನೀಲಕಂಠಪ್ಪ ಪತ್ತಾರ ಮುಂತಾದವರು ಸಣ್ಣಾಟ ಪ್ರಕಾರವನ್ನು ಹುಟ್ಟುಹಾಕಿ ಬೆಳೆಸಿದರು.

ಸಣ್ಣಾಟದಲ್ಲಿ ಡಪ್ಪು ಪ್ರಮುಖವಾದ ವಾದ್ಯ. ಈ ವಾದ್ಯದಿಂದಾಗಿ ಸಣ್ಣಾಟಕ್ಕೆ ಡಪ್ಪಿನಾಟ ಎಂಬ ಹೆಸರೂ ಇದೆ. ರಾಯಚೂರು, ಗುಲಬರ್ಗಾ ಜಿಲ್ಲೆಗಳಲ್ಲಿ ಸಣ್ಣಾಟವನ್ನು ಡಪ್ಪಿನಾಟ ಎಂದೇ ಕರೆಯುತ್ತಾರೆ.

ಸಣ್ಣಾಟಗಳು ಬಹುತೇಕ ಗೀತರೂಪಕಗಳು. ಹಾಡುತ್ತಾ ಕುಣಿಯುವುದೇ ಮೂಲ. ಮುಮ್ಮೇಳ-ಹಿಮ್ಮೇಳದವರು ಹಾಡಿದಂತೆ, ಪಾತ್ರಗಳು ಆಂಗಿಕ ಅಭಿನಯ ಮಾಡುತ್ತಾ ಕುಣಿಯುತ್ತವೆ. ಮಿತವಾದ ಸಂಭಾಷಣೆ, ಸರಳ ವೇಷಭೂಷಣ, ರಂಗಸಜ್ಜಿಕೆ, ಸರಳ ವಾದ್ಯಮೇಳ. ಜನರಿಗೆ ಮನರಂಜನೆಯೊಂದಿಗೆ ನೀತಿ ಬೋಧನೆ.

ಸಣ್ಣಾಟಗಳ ಕಥಾ ವಸ್ತು ದೊಡ್ಡಾಟದಲ್ಲಿರುವಂತೆ ಕಾಳಗ ಮತ್ತು ಕಲ್ಯಾಣಕ್ಕೆ ಸಂಬಂಧಿಸಿದ್ದಲ್ಲ. ಶರಣರು, ಸಾಧು ಸಂತರ ಜೀವನ ಚರಿತ್ರೆ, ಭಕ್ತಿ-ಮುಕ್ತಿ-ಜ್ಞಾನ-ವೈರಾಗ್ಯ-ಜೀವನ-ಸಂಸಾರ, ಮಾಯೆ, ಹೀಗೆ ಆಧ್ಯಾತ್ಮಿಕ ವಸ್ತು, ಭಕ್ತಿಯೊಂದಿಗೆ ಹಾಸ್ಯ-ಶೃಂಗಾರ. ಕರುಣ ರಸಗಳು ಮೇಳವಿಸಿವೆ. ಸಾಮಾಜಿಕ ವಿಷಯಗಳನ್ನು ಒಳಗೊಂಡ ಸಣ್ಣಾಟಗಳಲ್ಲಿ ಬರುವ ಪಾತ್ರಗಳು ಸರಳವಾದ ಉಡುಗೆ-ತೊಡುಗೆಗಳನ್ನು ಹೊಂದಿರುತ್ತವೆ. ಹೆಚ್ಚೆಂದರೆ ಮುಖಕ್ಕೆ ಒಂದಿಷ್ಟು ಬಣ್ಣ, ಕೊರಳಲ್ಲೊಂದು ಕೃತಕ ಹಾರ ಧರಿಸುತ್ತವೆ.  ಪುರುಷ ಪಾತ್ರಧಾರಿಗಳು ನಿಲುವಂಗಿ, ಧೋತರ ತಲೆಗೆ ಟೊಪ್ಪಿಗೆ ಇಲ್ಲವೆ ರುಮಾಲು, ನಡುವಿಗೆ ವಸ್ತ್ರ ಸ್ತ್ರೀ ಪಾತ್ರಧಾರಿಗಳು ಕಚ್ಚೆ ಹಾಕದ ಸೀರೆಯುಟ್ಟು ನಡುಪಟ್ಟಿ ಧರಿಸಿ  ಕೃತಕ ಹಾರಗಳು, ಕೈತುಂಬ ಬಳೆ, ಕಾಲಿಗೆ ಗೆಜ್ಜೆ, ಕೈಯಲ್ಲಿ ವಸ್ತ್ರ  ಹಿಡಿದಿರುತ್ತಾರೆ.

ಸಣ್ಣಾಟಗಳಲ್ಲಿ, ಸುಮಾರು ಒಂದೂವರೆ ಅಡಿ ಸುತ್ತಳತೆ, ನಾಲ್ಕು ಅಥವಾ ಐದಿಂಚು ಎತ್ತರದ ವೃತ್ತಾಕಾರದಲ್ಲಿರುವ ಬಳೆಗೆ ಹದಗೊಳಿಸಿದ ಕೋಣದ ಚರ್ಮ  ಬಿಗಿದು ಸಿದ್ಧಪಡಿಸಿದ ಡಪ್ಪು ಎಂಬ ವಾದ್ಯವನ್ನು ವಿಶೇಷವಾಗಿ ಬಳಸುತ್ತಾರೆ. ಎಡಗೈಯಿಂದ ದಪ್ಪುವಾದ್ಯವನ್ನು ಎದೆಗೆ ಆನಿಸಿಕೊಂಡು, ಬಲಗೈಯನ್ನು ಮೇಲೆತ್ತಿ ಕೈಯಲ್ಲಿಯ ಕಡ್ಡಿಯಿಂದ ಚಿಟುಗು ಹಚ್ಚಿ. ಬಾರಿಸುತ್ತಾರೆ. ಈ ಡಪ್ಪನ್ನು ಕಾಯಿಸುವುರಿಂದ ಒಳ್ಳೆಯ ನಾದ ಹೊರಹೊಮ್ಮುತ್ತದೆ. ಶ್ರುತಿಗಾಗಿ ಪುಂಗಿ ಇಲ್ಲವೆ ಹಾರ್ಮೋನಿಯಂ ಬಳಸುತ್ತಾರೆ. ಜೊತೆಗೆ ಹಿತ್ತಾಳೆಯ ತಾಳಗಳಿರುತ್ತವೆ.

ಸಣ್ಣಾಟದಲ್ಲಿ ಮುಮ್ಮೇಳದ ಹಾಡುಗಾರನಿಗೆ ಭಾಗವತ, ಮೇಟಿತಾಳ, ಕಥೆಗಾರ, ಮಾಸ್ತರ ಎಂದೆಲ್ಲಾ ಕರೆಯುತ್ತಾರೆ. ಸಣ್ಣಾಟ ಪ್ರದರ್ಶನದ ಯಶಸ್ಸು ಕಥೆಗಾರನನ್ನು ಅವಲಂಬಿಸಿರುತ್ತದೆ. ಹಾಡುವುದ ರೊಂದಿಗೆ ಕಥೆಯ ಗತಿಯನ್ನು ಕಾಯ್ದುಕೊಂಡು ಹೋಗುವ ಹೊಣೆ ಈತನಿಗೆ ಸೇರಿದ್ದು. ಸಣ್ಣಾಟದ ಪದ್ಯಗಳು ವೈವಿಧ್ಯಮಯ ಧಾಟಿಯಿಂದ ಕೂಡಿರುತ್ತವೆ. ಸಾಹಿತ್ಯ ಸಂಗೀತದಲ್ಲಿ ಯಾವದೇ ರಾಗ ತಾಳಗಳ ಜಂಜಾಟವಿಲ್ಲದ ಶುದ್ಧ ಜನಪದ ರಚನೆಗಳು. ಸಣ್ಣಾಟದ ಕುಣಿತವೂ ಸಹ ದೊಡ್ಡಾಟದಂತೆ ಅಬ್ಬರದ ಕುಣಿತವಲ್ಲ. ನಯ ನಾಜೂಕಿನ ಕುಣಿತದಿಂದ ಕೂಡಿದ್ದು. ಲಘುವಾಗಿರುತ್ತದೆ. ಸಣ್ಣಾಟದಲ್ಲಿನ ಪಾತ್ರಗಳು ಕೈಕಾಲು ಕತ್ತನ್ನು ಅತ್ತಿತ್ತ ಹೊರಳಾಡಿಸುತ್ತ ಆಂಗಿಕ ಚಲನೆಯೊಂದಿಗೆ ಕುಣಿಯುತ್ತವೆ. ಸಂಭಾಷಣೆಯೂ ಸಹ ಸರಳ ಮತ್ತು ನೇರ. ಚಿಕ್ಕ ವಾಕ್ಯಗಳು ನಾಲಿಗೆಗೆ ತೊಡರಾಗುವುದಿಲ್ಲ. ವೆಚ್ಚವೂ ಕಡಿಮೆ. ರಂಗ ಸಜ್ಜಿಕೆಯು ಸರಳ. ಪಾತ್ರಗಳ ವೇಷಗಳೂ ಸಾಮಾನ್ಯ, ಸಾಮಾನ್ಯವಾಗಿ ಹಬ್ಬ ಹರಿದಿನಗಳು ಜಾತ್ರೆ, ಉತ್ಸವಗಳಲ್ಲಿ ಸಣ್ಣಾಟಗಳು ಪ್ರದರ್ಶನಗೊಳ್ಳುತ್ತವೆ. ಸಣ್ಣಾಟಗಳಲ್ಲ ಶರಣರಾಟ, ದಾಸರಾಟ, ರಾಧಾನಾಟ ಮತ್ತು ಸಾಮಾಜಿಕ ಆಟಗಳೆಂದು ಬೇರೆ ಬೇರೆ ಪ್ರಕಾರಗಳಿವೆ.